


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068


SIHI KAHI
KANNADA DAILY MORNING
BAGALKOT

Volume : 07 | Issue : 174 | Sunday 16-03-2025 | E-mail : maruti.b.hosamani76@gmail.com | Page: 4 | Price : Rs. 1/-


## ಬಲಗೈ ಪಂಗಡದ ವರಿಂದ ಒಳ ಮೀಸಲಾತಿಗೆ ಆಗ್ರಹಿಸುತ್ತಿರುವ ಮಾದಿಗರನ್ನ ಕಾನೂನಿನ ಸುಳಿಯಲ್ಲಿ ಸಿಲುಕಿಸುವ ಷಡ್ಯಂತ್ರ ನಡೆಯುತ್ತಿದೆ

**ಸಿಹಿ ಕಹಿ ಸುದ್ದಿ,**
**ಕುಷ್ಟಗಿ :** ಈ ಬಲಗೈ ಪಂಗಡದವರು ಮಾದಿಗರನ್ನ ಕಾನೂನಿನ ಸುಳಿಯಲ್ಲಿ ಸಿಲುಕಿಸುವ ಪ್ರಯತ್ನ ಷಡ್ಯಂತ್ರ ರೂಪಿಸುತ್ತಿದ್ದಾರೆ.

ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂದ್ರ, ಎಂಬ ಪದಗಳ ಅಡಿಯಲ್ಲಿ ಹೊಲೆಯ/ಹೊಲೆಯರು, ಛಲವಾದಿ, ಹಾಗೂ ಮಾದಿಗ/ಮಾದರ ಜಾತಿಗಳವರು ಇರುತ್ತಾರೆ. ಆದರೇ ಹೊಲೆಯ ಛಲವಾದಿ ಜನಾಂಗದವರು ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಸುಮಾರು 30 ಲಕ್ಷ ಚಲವಾದಿ/ಹೊಲೆಯರು ಜನರು ಆದಿ ಕರ್ನಾಟಕ ಆದಿ ಆಂದ್ರ ಆದಿ ದ್ರಾವಿಡ ಎಂಬ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ ಆದ್ದರಿಂದ ಹೊಲೆಯ/ಚಲುವಾದಿ ಜನಾಂಗ ದವರಿಗೆ ಅತಿ ಹೆಚ್ಚು




ಪ್ರಮಾಣದಲ್ಲಿ ಒಳ ಮೀಸಲಾತಿ ನಿಗದಿ ಪಡಿಸಬೇಕು ಎಂಬುದು ಅವರ ವಾದ ಮತ್ತು ಈ ವಿಷಯವನ್ನು ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೆ ಮಾಡ ಬೇಕಾದರೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಇವರ ಕುತಂತ್ರ ರೂಪಿಸುತ್ತಿದೆ.

ಆದ್ರೆ ಈ ಆದಿ ಕರ್ನಾಟಕ ಆದಿ ಆಂದ್ರ ಆದಿ ದ್ರಾವಿಡ ಎಂಬ ಹೆಸರಿನಲ್ಲಿ ಇರುವ ಮಾದಿಗ ಸಮುದಾಯದವರು ತುಂಬಾ ಸರಳವಾಗಿ ಮಾದಿಗ ಎಂದು ಮೂಲ ಜಾತಿಯ ಕಾಲಂ ನಲ್ಲಿ ಸೇರಿಸಿ ಮಾದಿಗ ಎಂದು ಜಾತಿ ಪ್ರಮಾಣ ಪತ್ರ ಪಡೆದರೆ ಅಲ್ಲಿಗೆ ಮುಗಿಯಿತು. ಸಮಸ್ಯೆ ಸಂಪೂರ್ಣ ಮುಕ್ತಾಯ ವಾಗುತ್ತದೆ, ಆದರೇ ಈ ಹೊಲೇಯರು ವಿನಾಃ ಕಾರಣ ಈ ವಿಷಯವನ್ನು ಕೇಂದ್ರಕ್ಕೆ ಶಿಫಾರಸ್ಸು ಕಳುಹಿಸುವ ಮೂಲಕ ಅಲ್ಲಿ ಸಂಸತ್ ನಲ್ಲಿ ನಿರ್ಣಯ ಮಾಡಬೇಕು ಎಂದು ಆದರೆ ಈ ಮೇಲಿನ ಪ್ರಕಾರ ಮಾಡ ಬೇಕಾದರೇ 1/3 ಮೇಜಾರಿಟಿ ಸಂಸತ್ ಸದಸ್ಯರು ಒಪ್ಪಿಗೆ ಬೇಕು, ಇದು ಬಹಳ ಕಷ್ಟವಾದ ಕಾರ್ಯವಾಗಿದ್ದು.

ಇದರ ಮೂಲಕ ಮಾದಿಗರನ್ನು ಕಾನೂನಿನ ಸುಳಿಯಲ್ಲಿ ಸಿಲುಕಿಸಿ ಒಳ ಮೀಸಲಾತಿ ಜಾರಿಯನ್ನು ಹೇಗಾದರೂ ಮಾಡಿ ತಡೆಯಬೇಕು ಎಂದು ಷಡ್ಯಂತ್ರ ರೂಪಿಸಿದ್ದಾರೆ. ಎಂದು ಇದೆ ವಿಷಯವನ್ನು ಖ್ಯಾತ ವಕೀಲರಾದ ಶ್ರೀ ಅರುಣ ಕುಮಾರ ಸರ್ ಅವರು ಮಾದಿಗ ಸಮುದಾಯದ ಒಳ ಮೀಸಲಾತಿ ಹೋರಾಟಗಾರರಿಗೆ ಒತ್ತಿ ಒತ್ತಿ ಹೇಳಿದ್ದಾರೆ.

**ಶಿವಕುಮಾರ ದೊಡ್ಡಮನಿ ವಕೀಲರು**
**ಕುಷ್ಟಗಿ**

## ಎಲ್ಲರಿಗೂ ಸಮಾನ ಅವಕಾಶ: ಶಾಸಕ ಜಿ. ಹೆಚ್ ಶ್ರೀನಿವಾಸ್




**ಸಿಹಿ ಕಹಿ ಸುದ್ದಿ,**
**ತರೀಕೆರೆ :** ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಒಟ್ಟಾರೆ 4.25 ಲಕ್ಷ ಕೋಟಿ ಅನುದಾನವನ್ನು ಸರ್ಕಾರ ಕೊಟ್ಟಿದೆ ಎಂದು ಶಾಸಕರಾದ ಜಿ.ಎಚ್ ಶ್ರೀನಿವಾಸ್ ಹೇಳಿದರು. ಅವರು ಇಂದು ಪುರಸಭೆಯಲ್ಲಿ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ಪಾರ್ವತಮ್ಮ ರವರ ಅಭಿನಂದನ ಸಮಾರಂಭದಲ್ಲಿ ಮಾತನಾಡಿ ಎಲ್ಲರಿಗೂ ಸಮಾನ ಅವಕಾಶವನ್ನು ಕಲ್ಪಿಸಲಾಗಿದೆ ಎಂದು ಹೇಳಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಚ್.ಯು ಫಾರೂಕ್ ಮಾತನಾಡಿ ನಾರಾಯಣ ಗುರುಗಳು ಸಮಾಜದಲ್ಲಿ ಸಮಾನತೆಗಾಗಿ ಹೋರಾಟ ಮಾಡಿದ್ದಾರೆ ಇವರಿಂದ ಈಡಿಗ ಸಮಾಜಕ್ಕೆ ಗೌರವ ಅದೇ ರೀತಿ ಸಿದ್ದರಾಮಯ್ಯ ನವರಿಂದ ಕುರುಬ ಸಮಾಜಕ್ಕೆ ಗೌರವ ಎಂದು ಹೇಳಿದರು. ಬಸವಣ್ಣನವರು ಅನುಭವ ಮಂಟಪದಲ್ಲಿ ಸಮಾನತೆ ಸಾರಿದ ಹಾಗೆ ಇಂದು ಪಾರ್ವತಮ್ಮ ರವರನ್ನು ಪುರಸಭಾ ಉಪಾಧ್ಯಕ್ಷರಾಗಿ ಆಯ್ಕೆ ಮಾಡಿರುವುದು ಸೂಕ್ತ ಎಂದು ಹೇಳಿದರು. ಪುರಸಭಾ ಅಧ್ಯಕ್ಷರಾದ ವಸಂತ್ ಕುಮಾರ್ ಕವಾಲಿ ಮಾತನಾಡಿ ಎಲ್ಲರೂ ಒಟ್ಟಾಗಿ ಪಟ್ಟಣದ ಅಭಿವೃದ್ಧಿಗೆ ಕೈಜೋಡಿ ಸೋಣ ಎಂದು ಹೇಳಿದರು. ಜಾತ್ಯತೀತ ಜನತಾ ದಳದ ಅಧ್ಯಕ್ಷರಾದ ಎಂ.ನರೇಂದ್ರ ಮಾತನಾಡಿ 1985 ರಲ್ಲಿ ಹಿಂದುಳಿದ ಪಂಗಡಕ್ಕೆ ಸೇರಿಸಲಾದ ಈಡಿಗ ಸಮಾಜ ಶ್ರೇಷ್ಠ ಹಿನ್ನೆಲೆ ಇರುವ ಸಮುದಾಯ, ಶ್ರೀಮಂತ ಸಮುದಾಯ, ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಈ ಸಮಾಜ ಸ್ಥಾನಮಾನ ಪಡೆದಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಪುರಸಭಾ ಮಾಜಿ ಅಧ್ಯಕ್ಷರಾದ ಟಿ.ಎಸ್ ರಮೇಶ್, ಪ್ರಕಾಶ್ ವರ್ಮಾ, ಪರಮೇಶ್ ಹಾಗೂ ಸದಸ್ಯರಾದ ದಾದಾಪೀರ್, ಭೋಜರಾಜ್, ಶಶಾಂಕ್, ದಿವ್ಯ,ಆದಿಲ್ ಪಾಶ ಮತ್ತು ಪತ್ರಕರ್ತರಾದ ಅನಂತ್ ನಾಡಿಗ್ ಮಾತನಾಡಿದರು. ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಪರಶುರಾಮ್. ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್.ತರೀಕೆರೆ.ಚಿಕ್ಕಮಗಳೂರು**

## ಆರೋಗ್ಯ ಮೇಳ ಉದ್ಘಾಟಿಸಿದ ಸಚಿವ ದಿನೇಶ್ ಗುಂಡೂರಾವ್

**ಸಿಹಿ ಕಹಿ ಸುದ್ದಿ,**
**ಮಾನ್ವಿ :** ಸರಕಾರ ಜನಪರ ಯೋಜನೆಗಾಗಿ ಬದ್ಧವಾಗಿದ್ದರಿಂದ ಮಾನ್ವಿಯಲ್ಲಿ ಆರೋಗ್ಯ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಡಿಗ್ರಿ ಕಾಲೇಜು ಆವರಣದಲ್ಲಿ ಆರೋಗ್ಯ ಇಲಾಖೆ ಶನಿವಾರ ಹಮ್ಮಿ ಕೊಂಡಿದ್ದ ಆರೋಗ್ಯ ಮೇಳವನ್ನು ಉದ್ಘಾಟಿಸಿ ಮಾತನಾಡಿ, ಶಾಸಕ ಹಂಪಯ್ಯ ನಾಯಕ ಹಾಗೂ ಈ ಭಾಗದ ಸಚಿವ ಎನ್.ಎಸ್ ಬೋಸರಾಜು ಅವರು ನಮ್ಮ ಜೊತೆ ಸಂಪರ್ಕ ಮಾಡಿ ಮಾನ್ವಿ ತಾಲೂಕಲ್ಲಿ ಆರೋಗ್ಯ ಮೇಳ ಹಮ್ಮಿಕೊಳ್ಳಿ ಎಂದು ಕೇಳಿದ್ದರಿಂದ ಸರಕಾರ ಈ ಕಾರ್ಯಕ್ರಮ ಹಮ್ಮಿಕೊಂಡಿದೆ.

ಆರೋಗ್ಯ ಮೇಳದಲ್ಲಿ ತಜ್ಞ ವೈದ್ಯರು ಭಾಗವಹಿಸಿದ್ದು, ಆಯಾ ಚಿಕಿತ್ಸೆಗೆ ಸಲಹೆಯಂತೆ ಮಾಹಿತಿ ಪಡೆದು ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಜನರು ಆರೋಗ್ಯವಾಗಿ ಇರಬೇಕು ಎಂದು ಸರಕಾರ ಬಯಸುತ್ತದೆ ಎಂದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿಮಾನ್ವಿ**




## ರ-ಬ ನಗರಸಭೆ ಸಾಮಾನ್ಯ ಸಭೆಯಲ್ಲಿ ಸದಸ್ಯರ ಅಸಮಾಧಾನ

**ತಂಬಾಕು ಪದಾರ್ಥ ಮಾರಾಟಕ್ಕೆ ಅನುಮತಿ ಕಡ್ಡಾಯ | ಸ್ವಯಂಘೋಷಿತ ಆಸ್ತಿ ತೆರಿಗೆಯಲ್ಲಿ ಶೇ.3 ರಷ್ಟು ಹೆಚ್ಚಳ | ಅಭಿವೃದ್ಧಿಗೆ ಅನುದಾನದ ಕೊರತೆ**

**ರಬಕವಿ-ಬನಹಟ್ಟಿ :** ನಗರಸಭೆಯಲ್ಲಿ ಸಿಬ್ಬಂದಿ ಕೊರತೆ, ಮಾಹಿತಿ ಹಂಚಿಕೆ ಸೇರಿದಂತೆ ಯಾವುದೇ ವಿಚಾರಗಳನ್ನು ಅಧ್ಯಕ್ಷರ ಗಮನಕ್ಕೆ ಬಾರದಿರುವಾಗ ಸದಸ್ಯರ ಗತಿಯೇನು ? ಎಂದು ಸರ್ವ ಸದಸ್ಯರು ಆತಂಕ ವ್ಯಕ್ತಪಡಿಸಿದರು.

ಸೋಮವಾರ ದೀರ್ಘಕಾಲ ಜರುಗಿದ ಸಾಮಾನ್ಯ ಸಭೆಯಲ್ಲಿ ಬಹುತೇಕ ಸದಸ್ಯರು ತಮ್ಮ ವಾರ್ಡಗಳಲ್ಲಿ ಯಾವುದೇ ಸಾವ9ಜನಿಕ ಅಭಿವೃದ್ಧಿ ಕೆಲಸವಾಗದ ಕಾರಣ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಸಕ್ತ ವರ್ಷ 1.10 ಕೋಟಿ ರೂ.ಗಳಷ್ಟು ಸಾಲದ ಹೊರೆಯಲ್ಲಿರುವ ನಗರಸಭೆಗೆ ಅಭಿವೃದ್ಧಿವೆಂಬುದು ಮರೀಚಿಕೆ ಯಾಗಿದ್ದು , ಎಲ್ಲ 31 ವಾರ್ಡುಗಳಲ್ಲಿ ಸಣ್ಣಪುಟ್ಟ ಕಾಮಗಾರಿಗೂ ಯೋಚನೆ ಮಾಡುವ ದು:ಸ್ಥಿತಿ ಒದಗಿದೆ.

ಸದಸ್ಯ ಶಿವಾನಂದ ಬುದ್ನಿಯವರು, ಕನಿಷ್ಠ ಕೆಲಸಗಳಿಗಾದರೂ ಅವಕಾಶ ಕಲ್ಪಿಸಬೇಕೆಂದಾಗ, ಪೌರಾಯುಕ್ತ ಜಗದೀಶ ಈಟಿ ಮಾತನಾಡಿ, ಮೂಲಭೂತ ಸಮಸ್ಯೆಗಳಿಗೆ ಅನಿವಾರ್ಯವಾದ ಸ್ಪಂದನೆಯಾಗಿದ್ದು, ಇತರೆ ಕೆಲಸಗಳಿಗೆ ಸದಸ್ಯರು ಸಹಕರಿಸಬೇಕೆಂದರು.



ರಬಕವಿ-ಬನಹಟ್ಟಿ ನಗರಸಭೆ ಪ್ರದೇಶದಲ್ಲಿ ತಂಬಾಕು ಪದಾರ್ಥ ಮಾರಾಟ ಮಾಡುವವರು ಕಡ್ಡಾಯ ಅನುಮತಿ ಪಡೆಯಬೇಕು. ಫೀ ರೂ. 100 ಇದ್ದು ಕನಿಷ್ಠ 5 ವರ್ಷದ ಅವಧಿಗೆ 500 ರೂ. ಭರಣಾ ಮಾಡಬೇಕಿದೆ. ಸಂತೆ, ಕಾಯಿಪಲ್ಲೆ, ಜಾತ್ರೆ ತೆರಿಗೆ ಟೆಂಡರ್ ಕರೆಯುವಲ್ಲಿ ಸಭೆ ಅನುಮೋದಿಸಿತು.

ಸ್ವಯಂಘೋಷಿತ ಆಸ್ತಿ ತೆರಿಗೆಯಲ್ಲಿ ಶೇ. 3 ರಷ್ಟು ಹೆಚ್ಚಳಗೊಳಿಸಲಾಯಿತು. ಕುಡಿಯುವ ನೀರಿನ ಶುದ್ಧ ಘಟಕಕ್ಕೆ ಸಂಬಂಧಿಸಿದಂತೆ ಖಾಸಗಿ ನಿರ್ವಾಹಕರು ಟಿಡಿಎಸ್ ನ (ಲವಣಾಂಶ) ಪ್ರಮಾಣ ಪರಿಶೀಲನೆ ಜೊತೆಗೆ ಅನುಮತಿ ಪತ್ರದೊಂದಿಗೆ ನಿರ್ವಹಣೆ ಮಾಡಬೇಕೆಂದು ಸಭೆ ತೀರ್ಮಾನಿಸಿತು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗು ಹಿಂದುಳಿದ ವರ್ಗಗಳ ಫಲಾನುಭವಿಗಳಿಗೆ ಹೊಲಿಗೆ ಯಂತ್ರ, ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ, ವಿಕಲಚೇತನರಿಗೆ ಪೋಷಣಾ ಪೂರೈಕೆ ಕುರಿತು ಫಲಾನುಭವಿಗಳ ಆಯ್ಕೆಗೆ ಸಹಮತ ದೊರಕಿತು.

ಗೊಂದಲದಲ್ಲಿ ಅಮೃತ-2: ಈಗಾಗಲೇ ಬನಹಟ್ಟಿಯಲ್ಲಿ ವಿಫಲವಾಗಿರುವ ಕುಡಿಯುವ ನೀರಿನ ಯೋಜನೆ ಇದೀಗ ರಬಕವಿ-ಹೊಸೂರ-ರಾಮಪೂರ ಪಟ್ಟಣದಲ್ಲಿ ಸುಮಾರು 34 ಕೋಟಿ ರೂ.ಗಳ ವೆಚ್ಚದಲ್ಲಿ 90 ಕಿ.ಮೀ.ನಷ್ಟು ನಡೆಯುತ್ತಿರುವ ಕಾಮಗಾರಿಗೆ ಸದಸ್ಯರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದರ ಹಿನ್ನೆಲೆಯಲ್ಲಿ ನೀರಾವರಿ ಅಧಿಕಾರಿಗಳತಂಡದಿಂದಮಾತುಕತೆನಡೆದು ಕೊನೆಗೂ ಕಾಮಗಾರಿ ಸ್ಥಗಿತಗೊಳಿಸುವಂತೆ ಒತ್ತಾಯಪಡಿಸಲಾಯಿತು.

ಅಧಿಕಾರಿಗಳ ಕ್ರಮಕ್ಕೆ ಸದಸ್ಯರ ಬೇಸರ: ನಗರಸಭೆಯಲ್ಲಿ ನಡೆಯುವ ವ್ಯವಸ್ಥೆ ಕುರಿತು ಯಾವ ಸದಸ್ಯರಿಗೂ ಮಾಹಿತಿ ಬಾರದೆ ಕೇವಲ ಸಾಮಾನ್ಯ ಸಭೆಯಲ್ಲಿ ಇದರ ಮಾಹಿತಿ ಒದಗಿಸಿ ಗೊಂದಲ ಸೃಷ್ಟಿಸುವಂತಾಗುತ್ತಿದೆ.

ಅಲ್ಲದೆ ಸಿಬ್ಬಂದಿಗಳ ಕೊರತೆ ನೀಗಿಸುವಲ್ಲಿ ವಿಫಲವಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಸರ್ವ ಸದಸ್ಯರು ತೆರಳಿ ಒತ್ತಡ ಹೇರುತ್ತೇವೆಂದು ನಗರಾಧ್ಯಕ್ಷೆ ವಿದ್ಯಾ ದಭಾಡಿ ಸೇರಿದಂತೆ ಸ್ಥಾಯಿ ಸಮಿತಿ ಚೇರಮನ್ ಅರುಣ ಬುದ್ನಿ, ಸದಸ್ಯರಾದ ಬಸವರಾಜ ಗುಡ್ಡೋಡಗಿ, ಗೌರಿ ಮಿಳ್ಳಿ, ಶಶಿಕಲಾ ಸಾರವಾಡ, ದುರ್ಗವ್ವ ಹರಿಜನ, ಜಯಶ್ರೀಬಾಗೇವಾಡಿಸೇರಿದಂತೆಅನೇಕರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಲಹಾ ಸಮಿತಿ ನೂತನ ಸದಸ್ಯರಾಗಿ ನೇಮಕಗೊಂಡ ರಾಹುಲ ಕಲಾಲ ಹಾಗು ಕಾಡು ಮೋಪಗಾರರನ್ನು ಹಾರ್ದಿಕವಾಗಿ ಸನ್ಮಾನಿಸಲಾಯಿತು.

## ಜೆವಿ ಮಂಡಳ ಶಿಕ್ಷಕರಿಂದ ವಿನೂತನ ಪ್ರಯೋಗ





**ತೇರದಾಳ :** ಮಾರ್ಚ್ 21 ರಿಂದ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ರಾಜ್ಯಾದ್ಯಂತ ಪ್ರಾರಂಭಗೊಳ್ಳಲಿದ್ದು, ಈಗಾಗಲೇ ವಿದ್ಯಾರ್ಥಿಗಳಿಗೆ ಶಿಕ್ಷಕರು ಸಾಕಷ್ಟು ಹೆಚ್ಚಿನ ತರಗತಿಗಳನ್ನು ತಗೆದುಕೊಳ್ಳುವುದು, ಬೆಳಗಿನ ಜಾವ ಓದಲು ಎಬ್ಬಿಸುವುದು, ಮನೆ ಮನೆಗೆ ಭೇಟಿ ನೀಡಿ ಪರೀಕ್ಷೆ ಮುಗಿಯುವವರೆಗೆ ವಿದ್ಯಾರ್ಥಿಗಳಿಗೆ ಯಾವುದೇ ಕೆಲಸ ಹಚ್ಚಬೇಡಿ ಎಂದು ಸೇರಿದಂತೆ ಹಲವು ರೀತಿಯಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ತಯಾರಿಗೊಳಿಸುತ್ತಿದ್ದಾರೆ.

ಇಲ್ಲಿನ ಜೆವಿ ಮಂಡಳದ ಜಿನಸೇನಾಚಾರ್ಯ ಹೆಣ್ಣುಮಕ್ಕಳ ಪ್ರೌಢಶಾಲೆ ಶಿಕ್ಷಕರು ವಿಶ್ವ ಮಹಿಳಾ ದಿನಾಚರಣೆ ನಿಮಿತ್ಯ ತಾಯಂದಿರ ಸಭೆ ಏರ್ಪಡಿಸಿ ಸಭೆಯಲ್ಲಿ ಮಕ್ಕಳ ಮುಂದೆಯೇ ತಾಯಂದಿರಿಗೆ ಮಕ್ಕಳು ಮನೆಯಲ್ಲಿರುವ ಸಮಯದಲ್ಲಿ ಟಿವಿ ಹಾಗೂ ಮೊಬೈಲ್ ಬಳಸದಂತೆ ಪ್ರಮಾಣ ವಚನ ಬೋಧಿಸುವ ಮೂಲಕ ವಿನೂತನ ಪ್ರಯೋಗದ ಕಾರ್ಯ ಮಾಡಿದ್ದಾರೆ. ಮಕ್ಕಳು ಮನೆಯಲ್ಲಿ ಇದ್ದಾಗ ನೀವು ಮೊಬೈಲ್ ಬಳಸುವುದು, ಟಿವಿ ಧಾರಾವಾಹಿಗಳನ್ನು ನೋಡುವುದು ಮಾಡಿದರೆ ಮಕ್ಕಳಿಗೆ ಓದಿಕೊಳ್ಳಲು ಅಡ್ಡಿಯಾಗುತ್ತದೆ ಹಾಗೂ ಮನಃಸ್ಥಿತಿ ಬದಲಾಗುತ್ತದೆ. ಆದ್ದರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ಕೊನೆಗೊಳ್ಳುವವರೆಗೆ ಮಕ್ಕಳಿಗೆ ಯಾವುದೇ ಕೆಲಸ ಹಚ್ಚದೆ ಅವರಿಗೆ ಓದಿಕೊಳ್ಳಲು ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಇದರಿಂದ ಮಕ್ಕಳಿಗೆ ನಿಮ್ಮ ಮೇಲೆ ಮತ್ತಷ್ಟು ಗೌರವ ಹೆಚ್ಚಾಗುತ್ತದೆ ಎಂದು ಮುಖ್ಯ ಗುರುಮಾತೆ ಎಸ್. ಎನ್. ಹೆಬ್ಬಾಳೆ ಕಿವಿಮಾತು ಹೇಳಿದರು. ತಾಯಂದಿರು ಕೂಡ ಅಷ್ಟೇ ಪ್ರಾಮಾಣಿಕವಾಗಿ ಶಿಕ್ಷಕರ ಸಲಹೆಗಳನ್ನು ಸ್ವೀಕರಿಸಿ ಮಕ್ಕಳ ಓದಿಗೆ ತೊಂದರೆ ಆಗದಂತೆ ನೋಡಿಕೊಳ್ಳುವ ಭರವಸೆ ನೀಡಿದರು.

ವಿದ್ಯಾರ್ಥಿನಿಯರಿಂದ ಇದೇ ಸಂದರ್ಭದಲ್ಲಿ ತಾಯಂದಿರ ಪಾದಪೂಜೆ ಜರುಗಿತು. ಈ ಸಂದರ್ಭದಲ್ಲಿ ಶಿಕ್ಷಕರಾದ ಬಿ. ಆರ್. ಚೌಕಾ, ಎಂ. ಪಿ. ಸವದತ್ತಿ, ಮನೋಹರ ಯಾದಗಿರಿ, ಬಿ. ಡಿ. ಉಪಾಧ್ಯೆ, ಕವಿತಾ ಸಾವಂತನವರ, ನೇಮಿನಾಥ ಜಮಖಂಡಿ ಪಾಲ್ಗೊಂಡಿದ್ದರು.

## ವಿಶ್ವವಿದ್ಯಾಲಯದ ಮುಂದುವರಿಕೆಗೆ ಕಸಾಪ ಒತ್ತಾಯ

**ಜಮಖಂಡಿ :** ನಗರದ ಬಾಗಲಕೋಟೆ ವಿಶ್ವವಿದ್ಯಾಲಯ ಮುಚ್ಚುವ ಅಥವಾ ವಿಲೀನಗೊಳಿಸುವ ನಿರ್ಧಾರವನ್ನು ರಾಜ್ಯ ಸರ್ಕಾರ ತಕ್ಷಣವೇ ಕೈಬಿಡಬೇಕು ಎಂದು ಒತ್ತಾಯಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಜಮಖಂಡಿ ತಾಲ್ಲೂಕು ಘಟಕದ ಪರವಾಗಿ ತಹಶೀಲ್ದಾರ ಕಚೇರಿಯ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಬಾಗಲಕೋಟೆ ವಿಶ್ವವಿದ್ಯಾಲಯವನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದೆಂದು ಒತ್ತಾಯಿಸಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನಗರದ ಎ. ಜಿ. ದೇಸಾಯಿ ವೃತ್ತದಲ್ಲಿಹಲವುದಿನಗಳಿಂದನಡೆಸುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಸೋಮವಾರ ಬೆಂಬಲ ಸೂಚಿಸಲಾಯಿತು.

ಜಮಖಂಡಿ ಭಾಗದ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳ ಯುವ ಜನರು ಉನ್ನತ ಶಿಕ್ಷಣ ಪಡೆಯುವ ಅವಕಾಶವನ್ನು ಸ್ಥಳೀಯವಾಗಿ ಪಡೆದಿದ್ದಾರೆ. ಆದರೆ, ಬಾಗಲಕೋಟೆ ವಿಶ್ವವಿದ್ಯಾಲಯವನ್ನು ಮುಚ್ಚುವುದರಿಂದ ಅಸಮಾನತೆ ಹಾಗೂ ಅದರ ಪರಿಣಾಮದಿಂದಾಗಿ ಘೋರವಾದ ಸಾಮಾಜಿಕ ಅಶಾಂತಿ ಮತ್ತು ತಳಮಳಕ್ಕೆ ಕಾರಣವಾಗುತ್ತದೆ.



ಮೊದಲ ತಲೆಮಾರಿನ ಮಹಿಳೆಯರು ಇದೀಗ ತಾನೆ ಉನ್ನತ ಶಿಕ್ಷಣದ ಹೊಸ್ತಿಲಲ್ಲಿ ನಿಂತಿರುವಾಗ ವಿಶ್ವವಿದ್ಯಾಲಯವನ್ನು ಮುಚ್ಚುವ ಅಥವಾ ಬೇರೆ ವಿಶ್ವವಿದ್ಯಾಲಯದೊಂದಿಗೆ ವಿಲೀನಗೊಳಿಸುವ ಸರ್ಕಾರದ ನಿರ್ಧಾರ ಮಹಿಳೆಯರ ಪಾಲಿನ ಮರಣ ಶಾಸನವಾಗುವ ಅಪಾಯವಿದೆ.

ಡಿಜಿಟಲ್ ಮತ್ತು ಕೌಶಲ ಆಧಾರಿತ ಬಾಗಲಕೋಟೆ ವಿಶ್ವವಿದ್ಯಾಲಯವನ್ನು ಸಾಮಾನ್ಯ ಪದವಿ ಶಿಕ್ಷಣ ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸಿ ಜಮೀನು, ಕಟ್ಟಡ, ಸಿಬ್ಬಂದಿ ಮತ್ತು ಸಂಪನ್ಮೂಲಒದಗಿಸಿಮುಂದುವರಿಸಬೇಕು. ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ ಜಮಖಂಡಿ ವಿಶ್ವವಿದ್ಯಾಲಯ ಎಂದು ಮರುನಾಮಕರಣ ಮಾಡಬೇಕು.

ಒಂದು ವೇಳೆ ವಿಶ್ವವಿದ್ಯಾಲಯವನ್ನು ಮುಂದುವರೆಸದಿದ್ದರೆ ತಾತ್ವಿಕ ಸಂಘರ್ಷ ನಡೆಸಲಾಗುವುದು. ಬಾಗಲಕೋಟೆ ವಿಶ್ವವಿದ್ಯಾಲಯವನ್ನು ಉಳಿಸಿಕೊಳ್ಳಲು ಜನಾಂದೋಲನ ರೂಪಿಸಬೇಕಾಗುತ್ತದೆ ಎಂದು ಮನವಿಯಲ್ಲಿ ಎಚ್ಚರಿಸಲಾಗಿದೆ.

ಕಸಾಪ ಸಲಹಾ ಸಮಿತಿ ಸದಸ್ಯ ಡಾ. ಟಿ. ಪಿ. ಗಿರಡ್ಡಿ ಮಾತನಾಡಿ, ವಿಶ್ವವಿದ್ಯಾಲಯವನ್ನು ಮುಚ್ಚುವುದು ಉನ್ನತ ಶಿಕ್ಷಣದ ನಿರ್ಗಮನ ನೀತಿ ಎನಿಸುತ್ತದೆ. ಉನ್ನತ ಶಿಕ್ಷಣದ ಮೂಲ ಉದ್ದೇಶವನ್ನು ಪಲ್ಲಟಗೊಳಿಸುವ ಹುನ್ನಾರವಾಗಿದೆ. ತಜ್ಞರ ಜಾಗದಲ್ಲಿ ಶಿಕ್ಷಣೋದ್ಯಮಿಗಳು ಹಾಗೂ ಅಗೋಚರ ಆಡಳಿತಗಾರರು ಆಕ್ರಮಿಸಿರುವುದರಿಂದ ಶಿಕ್ಷಣ ಕ್ಷೇತ್ರದ ಅಪಹರಣ ನಡೆಯುತ್ತಿದೆ ಎಂದು ಕಿಡಿ ಕಾರಿದರು.

ತಹಶೀಲ್ದಾರ್ ಕಚೇರಿಯ ಶಿರಸ್ತೆದಾರ ಶಶಿಧರ ಚಲವಾದಿ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಶ ತಳಕೇರಿ, ಗೌರವ ಕಾರ್ಯದರ್ಶಿ ವಿನೋದ ಲೋಣಿ, ಸಲಹಾ ಸಮಿತಿ ಸದಸ್ಯರಾದ ಡಾ. ತಾತಾಸಾಹೇಬ ಬಾಂಗಿ, ಮಲ್ಲಿಕಾರ್ಜುನ ಇಂಡಿ, ಗುರುನಾಥ ಸುತಾರ, ಬಿ. ಎನ್. ಅಸ್ಕಿ ಮನವಿ ಸಲ್ಲಿಸಿದ ನಿಯೋಗದಲ್ಲಿದ್ದರು.

ಇದೇ ಸಂದರ್ಭದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಾಜಿ ಸಿಂಡಿಕೇಟ್ ಸದಸ್ಯ ಸಂದೀಪ ಬೆಳಗಲಿ, ಬಿಜೆಪಿ ಧುರೀಣ ಏಗಪ್ಪ ಸವದಿ, ಪತ್ರಕರ್ತ ಡಾ. ಮಲ್ಲಿಕಾರ್ಜುನ ಮಠ ಉಪಸ್ಥಿತರಿದ್ದರು. ಮುತ್ತಿನಕಂತಿ ಹಿರೇಮಠದ ಶಿವಲಿಂಗ ಶ್ರೀಗಳು, ಕೊಣ್ಣೂರಿನ ಹೊರಗಿನ ಕಲ್ಯಾಣ ಮಠದ ಡಾ. ವಿಶ್ವಪ್ರಭುದೇವ ಶ್ರೀಗಳು, ಆಲಗೂರಿನ ಧರಿದೇವರು ಶ್ರೀಗಳು, ಸಿಂದಗಿ ಸಾರಂಗ ಮಠದ ಶ್ರೀಗಳು ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ಸೂಚಿಸಿದರು.

## ಗಂಡ-ಹೆಂಡತಿ ಜಗಳದಲ್ಲಿ ಬೈಕ್‌ಗೆ ಬೆಂಕಿಯಿಟ್ಟ ಭೂಪ..!



**ಬನಹಟ್ಟಿ :** ಮನೆಯಲ್ಲಿನ ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯ್ತು ಎನ್ನುವಂತೆ ತಮ್ಮದೇ ಬೈಕಿಗೆ ಗಂಡ ಬೆಂಕಿ ಹಚ್ಚಿದ ಪ್ರಸಂಗ ರವಿವಾರ ಸಂಜೆ ನಡೆದಿದೆ.

ಇಲ್ಲಿಯ ಸೋಮವಾರ ಪೇಟೆಯ ಹಳೆ ಅಂಚೆ ಕಚೇರಿ ಹತ್ತಿರ ಬಾಡಿಗೆ ಮನೆಯಲ್ಲಿ ಪತ್ನಿ ಬೇರೆ ಮನೆಯಲ್ಲಿ ವಾಸವಾಗಿದ್ದಳು. ರವಿವಾರ ಸಂಜೆ ಹೊತ್ತು ಪತ್ನಿಯ ಮನೆಗೆ ಬಂದ ಪತಿ ಜಗಳವಾಡಿದ್ದಾನೆ.

ನಂತರ ರಸ್ತೆ ಮೇಲಿದ್ದ ಪತ್ನಿಯ ಸ್ಕೂಟಿ ಬೈಕ್ಗೆ ಬೆಂಕಿ ಹಚ್ಚಿದ ಪ್ರಸಂಗ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು ಸ್ಥಳೀಯರು ನಿಂತು ಮಜ ನೋಡುತ್ತಿರುವುದು ಕಂಡು ಬಂದಿದೆ.

ಸಂಜೆ ಹೊತ್ತು ಜನಜಂಗುಳಿ ಮಧ್ಯೆಯೇ ಇಂತಹ ಕೃತ್ಯ ನಡೆದಿದೆ.

ಪ್ರಕರಣದಕುರಿತುಪೊಲೀಸರುವಿಚಾರಣೆನಡೆಸುತ್ತಿದ್ದು, ಯಾವುದೇ ಪ್ರಕರಣ ದಾಖಲಾಗಿಲ್ಲ. ಪೆಟ್ರೋಲ್ ಬೈಕ ಇದ್ದ ಕಾರಣ ಸ್ಫೋಟಗೊಳ್ಳಬಹುದೆಂದು ಹೆದರಿ ಜನರು ದೂರ ನಿಂತಿದ್ದರು. ಸಕಾಲಕ್ಕೆ ಅಗ್ನಿಶಾಮಕ ಹಾಗು ಪೊಲೀಸ್ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

# ಶಾಂತಿ ಸೌಹಾರ್ದತೆಯಿಂದ ಹೋಳಿ ಆಚರಿಸಿ: ಪಿಎಸ್ಐ ಐಗಳಿ



**ರಬಕವಿ :** ಕೆಮಿಕಲ್ ಮಿಶ್ರಿತ ಹಾಗೂ ನೂಲಿಗೆ ಬಳಸುವ ಟಾಪಿಂಗ್ ಬಣ್ಣ ಬಳಸಿ ಆಡುವುದು ಮತ್ತು ಎರಚುವುದನ್ನು ಮಾಡಬೇಡಿರಿ. ರಾಸಾಯನಿಕ ರಹಿತ ಪೌಡರ್ ಬಣ್ಣ ಹಚ್ಚಿ ಕಾನೂನಿನ ಚೌಕಟ್ಟಿನಲ್ಲಿ ಹೋಳಿ ಹಬ್ಬವನ್ನು ಸಂಭ್ರಮಿಸಿ ಎಂದು ತೇರದಾಳ ಪೊಲೀಸ್ ಠಾಣೆಯ ಪಿಎಸ್ಐ ಅಪ್ಪು ಐಗಳಿ ತಿಳಿಸಿದರು.

ಶನಿವಾರ ರಾತ್ರಿ ರಬಕವಿಯ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಜರುಗಿದ ಹೋಳಿ ಹಬ್ಬದ ನಿಮಿತ್ಯ ಸಾರ್ವಜನಿಕರ ಶಾಂತಿಪಾಲನಾ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ನಮ್ಮದು ಜಾತ್ಯಾತೀತ ಹಾಗೂ ಸೌಹಾರ್ದತೆಯಿಂದ ಕೂಡಿದ ದೇಶವಾಗಿದೆ. ಈಗ ರಮ್ಜಾನ್ ಹಬ್ಬ ಕೂಡಾ ಇರುವುದರಿಂದ ಅವರ ಭಾವನೆಗಳಿಗೆ ಧಕ್ಕೆಯಾಗದಂತೆ ಸರ್ವ ಸಮುದಾಯದವರು ಹಬ್ಬವನ್ನು ಸಂಭ್ರಮದಿಂದ ಆಚರಿಸಿರಿ. ಪಿಯುಸಿ ದ್ವಿತೀಯ ವಿದ್ಯಾರ್ಥಿಗಳ ಪರೀಕ್ಷೆಗಳಿರುವುದರಿಂದ ಸಾರ್ವಜನಿಕರು ಹೋಳಿ ಹಬ್ಬದಲ್ಲಿ ಅವರಿಗೆ ಬಣ್ಣ ಎರಚಬೇಡಿ,

ನಗರದಲ್ಲಿ ಮಹಿಳೆಯರು ಹಾಗೂ ಪುರುಷರು ಪ್ರತ್ಯೇಕವಾಗಿ ಶಂಕರಲಿಂಗ ದೇವಸ್ಥಾನ ಆವರಣದಲ್ಲಿ ಈ ಬಾರಿ ಬೃಹತ್ ಪ್ರಮಾಣದಲ್ಲಿ ಬಣ್ಣ ಆಡುವ ನಿರ್ಧಾರ ಮಾಡಿದ್ದರಿಂದ ಬಹಳ ಅಚ್ಚುಕಟ್ಟಾಗಿ ಆಡಬೇಕು. ಯುವಕರು ದ್ವಿಚಕ್ರ ವಾಹನಗಳನ್ನು ಸೈಲೆನ್ಸರ ಪೈಪು ತೆಗೆದು ಕಕ9ಶ ಧ್ವನಿಯಿಂದ ಓಡಿಸಿದರೆ ಅಂಥಹ ವಾಹನಗಳನ್ನು ಸೀಜ್ ಮಾಡಲಾಗುವುದು. ಇದಕ್ಕೆ ನಗರದ ಹಿರಿಯರ ಸಹಕಾರಬೇಕು ಎಂದು ಪಿಎಸ್ಐ ಖಡಕ್ ಎಚ್ಚರಿಕೆ ನೀಡಿದರು.

ಸಾರ್ವಜನಿಕರ ಜೀವ ರಕ್ಷಣೆ ಆಸ್ತಿಪಾಸ್ತಿ ಸಂರಕ್ಷಿಸುವುದು ಇಲಾಖೆಯ ಆದ್ಯ ಕರ್ತವ್ಯ. ಅದರಂತೆ ಸಾರ್ವಜನಿಕರು ತಮ್ಮ ಜವಾಬ್ದಾರಿಗಳನ್ನು ಅರಿತು ಇಲಾಖೆಗೆ ಸಹಕಾರ ನೀಡಬೇಕು. ಕಾನೂನು ಚೌಕಟ್ಟನ್ನು ಯಾರೇ ಮೀರಿದರೂ ತಕ್ಕ ಶಿಕ್ಷೆ ಗ್ಯಾರಂಟಿ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ನಗರದ ಹಿರಿಯರಾದ ರಾಮಣ್ಣ ಹುಲಕುಂದ, ಮಹಾದೇವ ದುಪದಾಳ, ಸಂಜಯ ತೆಗ್ಗಿ, ಮಾರುತಿ ನಾಯಿಕ, ಧರೆಪ್ಪ ಉಳ್ಳಾಗಡ್ಡಿ, ಪ್ರಭು ಪುಜಾರಿ, ಉಸ್ಮಾನಸಾಬ ಲೇಂಗ್ರೆ ಮಾತನಾಡಿದರು.

ಈ ವರ್ಷ ಶಂಕರಲಿಂಗ ದೇವಸ್ಥಾನದ ಆವರಣದಲ್ಲಿ ಮಹಿಳೆಯರು ಮತ್ತು ಪುರುಷರು ಪ್ರತ್ಯೇಕವಾಗಿ ಹೋಳಿ ಆಚರಿಸಲು ನಿರ್ಧರಿಸಿದ್ದಾರೆ. ಎಲ್ಲರೂ ಸೌಹಾರ್ದತೆಯಿಂದ ಸಂಭ್ರಮದಿಂದ ಹಬ್ಬ ಆಚರಿಸಲು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ನಗರದ ಹಿರಿಯರಾದ ಮಾರುತಿ ನಾಯಿಕ, ಮೋನಪ್ಪ ಹೆಗ್ಗಣ್ಣವರ, ಬಾಬು ಮಹಾಜನ, ಸುನೀಲ ಸಿಕ್ಕಲಗಾರ, ರವಿ ಮುತ್ತೂರ, ಚಂದ್ರಪ್ಪ ಹರಿಜನ, ಯಲ್ಲಪ್ಪ ಕಟಗಿ, ಚಂದ್ರು ಇಮ್ಮಡಿ, ಪ್ರಕಾಶ ಸಣಕಾಲ, ಈಶ್ವರ ನಾಗರಾಳ, ಮಲ್ಲಿಕಾರ್ಜುನ ಕುಚನೂರ, ರಬಕವಿ ಓಪಿಯ ಕೆ. ಎಸ್. ರಜಪುತ, ಮಲ್ಲಪ್ಪ ದೊಡ್ಡಟ್ಟಿ, ಪರಶುರಾಮ ಭಸ್ಮೆ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

# ಮುಗಳಖೋಡದಲ್ಲಿ ತತ್ವದರ್ಶನ: ಒಂದು ತಿಂಗಳ ಆಧ್ಯಾತ್ಮಿಕ ಚಿಂತನ

**ಮುಧೋಳ :** ತಾಲೂಕಿನ ಮುಗಳಖೋಡ ಗ್ರಾಮದ ಸಿದ್ಧಾರೂಢ ಭಾರತಿ ಆಶ್ರಮದಲ್ಲಿ 2025 ಏಪ್ರಿಲ್ 14 ರಿಂದ 18 ರ ವರೆಗೆ 5 ದಿನಗಳ ಕಾಲ ಶಿವಾನಂದ ಭಾರತಿ ಅಪ್ಪಾಜಿಯವರ ಸಾನಿಧ್ಯದಲ್ಲಿ ಜರುಗುವ ಅಖಿಲ ಭಾರತ ಸತ್ಸಂಗ ಸಮ್ಮೇಳನದ ಅಂಗವಾಗಿ ಪೂರ್ವಭಾವಿಯಾಗಿರವಿವಾರಮಾರ್ಚ್ ದಿ.9ರಿಂದ ಏಪ್ರಿಲ್ 12 ರ ವರೆಗೆ ಒಂದು ತಿಂಗಳ ಪರ್ಯಂತರ ತತ್ವ–ದರ್ಶನ–ಮನೆಯಂಗಳದಲ್ಲಿ ಶರಣರ ಮನದ ಮಾತು ಆಧ್ಯಾತ್ಮಿಕ ಚಿಂತನ ಕಾರ್ಯಕ್ರಮವು ಜರುಗುವುದು ಎಂದು ಸಿದ್ಧಾರೂಢ ಭಾರತಿ ಆಶ್ರಮದ ಶರಣಬಸವ ಶಾಸ್ತ್ರಿಗಳು ತಿಳಿಸಿದ್ದಾರೆ.

ಪ್ರತಿದಿನ ಮುಂಜಾನೆ 6 ರಿಂದ 7 ರ ವರೆಗೆ ನಿತ್ಯ ತತ್ವ ಚಿಂತನ –ಭಕ್ತಿ–ಬೆಳಗು ಕಾರ್ಯಕ್ರಮ. ಸಂಜೆ–8 ರಿಂದ 9 ರ ವರೆಗೆ "ಶರಣ ಚರಿತ್ರಾಮೃತ" ಆಧ್ಯಾತ್ಮಿಕ ಚಿಂತನ.

ಪ್ರವಚನ ಕಾರ್ಯಕ್ರಮವು ನಡೆಯುವುದು. ಕುಳಲಿ ಗುರುನಾಥಾರೂಢರ ಮಠದ ಶಂಕರಾನಂದ ಶ್ರೀಗಳು ಜ್ಯೋತಿ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸತ್ಸಂಗದಲ್ಲಿ ಪಾಲ್ಗೊಳ್ಳಲು ಶಾಸ್ತ್ರಿಗಳು ಕೋರಿದ್ದಾರೆ.

# ಮಕ್ಕಳ ಉಜ್ವಲ ಭವಿಷ್ಯಕ್ಕೆ ತಾಯಂದಿರ ಕೊಡುಗೆ ನಿರ್ಣಾಯಕ

**ಬನಹಟ್ಟಿ :** ಹೆಣ್ಣು ಮಕ್ಕಳು ಅಬಲೆಯರಲ್ಲ. ಮಕ್ಕಳನ್ನುತಿದ್ದಿತೀಡುವಪ್ರಮುಖಪಾತ್ರಧಾರಿ. ತಾಯಿ ಮನಸ್ಸು ಮಾಡಿದರೆ ವಿದ್ಯಾರ್ಥಿಗಳ ಬದುಕನ್ನು ಬದಲಾಯಿಸಬಹುದು. ಮಕ್ಕಳ ಉಜ್ವಲ ಭವಿಷ್ಯ ರೂಪಿಸಲು ತಾಯಂದಿರು ನಿರ್ಣಾಯಕ ಪಾತ್ರ ವಹಿಸುತ್ತಾರೆ ಎಂದು ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಶೈಲಾ ಬುರ್ಲಿ ಹೇಳಿದರು.

ಬನಹಟ್ಟಿಯ ಕೆ. ಎಚ್. ಡಿ. ಸಿ. ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹಿಳಾದಿನಾಚರಣೆಯಪ್ರಯುಕ್ತಜರುಗಿದ ತಾಯಂದಿರ ಆಟೋಟಗಳ ಸ್ಪರ್ಧೆಗಳನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಮಹಿಳೆಯರು ಸಮಾಜದ ಅವಿಭಾಜ್ಯ ಅಂಗ. ತಾಯಿಯಾಗಿ, ತಂಗಿಯಾಗಿ, ಹೆಂಡತಿಯಾಗಿ, ಮಗಳಾಗಿ ಹೆಣ್ಣು ಮಕ್ಕಳು ಇಂದು ಮನೆಯ ಜವಾಬ್ದಾರಿ ಹೊರುವ ಜೊತೆಗೆ ಸಮಾಜದ ವಿವಿಧ ರಂಗಗಳಲ್ಲಿ ಸಾಧನೆಯ ಶಿಖರಕ್ಕೆ ಏರುತ್ತಿದ್ದಾರೆ ಎಂದರು. ಮಹಿಳೆಯರು ಹೊಸ ಅವಕಾಶಗಳಿಗೆ



ತಮ್ಮನ್ನು ತಾವು ತೆರೆದುಕೊಳ್ಳಬೇಕು. ಸಿಗುವ ಅವಕಾಶಗಳಲ್ಲಿ ತಮ್ಮ ಅತ್ಯುತ್ತಮ ಪ್ರತಿಭೆಯನ್ನು ಪ್ರದರ್ಶಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿಕ್ಷಕಿ ವಿದ್ಯಾ ಆಸಂಗಿ ಮಹಿಳೆಯರು ಕುಟುಂಬವನ್ನು ತಿದ್ದಿ ತೀಡಬಲ್ಲರು. ಇಂದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಕಾಣುತ್ತಿದ್ದೇವೆ. ಹೆಣ್ಣು ಮಕ್ಕಳಲ್ಲಿ ಅಪಾರ ಶಕ್ತಿ ಇದ್ದು ಅದನ್ನು ಹೊರಗೆ ತರಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಭಾರಿ ಮುಖ್ಯ ಗುರುಮಾತೆ ಬಿ. ವಿ. ತೆಗ್ಗಿ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣುಮಕ್ಕಳಿಗೆ ತುಂಬಾ ಗೌರವ ಸ್ಥಾನವಿದೆ. ಮಹಿಳೆಯರು ಸಂಸ್ಕೃತಿ ಸಂಪ್ರದಾಯಗಳ ಹರಿಕಾರರು ಎಂದು ತಿಳಿಸಿದರು.

ತಾಯಿ ಮಕ್ಕಳ ಕಣ್ಣು ಮುಚ್ಚಾಲೆ ಆಟ, ಸಂಗೀತ ಕುರ್ಚಿ, ಸೀರೆ ಉಡಿಸುವುದು ಮತ್ತು ಮೇಕಪ್ ಮಾಡುವುದು, ಪಾಸಿಂಗದ ಬಾಲ್,

ಹಣೆ ಮೇಲೆ ಬಿಸ್ಕಿಟ್ ಇಟ್ಟುಕೊಂಡು ಅದನ್ನು ಕೆಳಗೆ ಬೀಳಿಸದೇ ತಿನ್ನುವುದು ಮುಂತಾದ ಆಟಗಳನ್ನು ಆಡಿಸಿ ಪಾಲಕ ತಾಯಂದಿರಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಹೇಮಾ ಜೀರಂಕಲಗಿ, ಸವಿತಾಕಿತ್ತೂರ,ಶೀಲಾಹಿಪಲಿ,ಚಂದ್ರಕಾಂತ ಜೈನಾಪುರ, ಮುಜರಿನ್ ಮುಲ್ಲಾ, ಜ್ಯೋತಿ ಕೆರೂರ, ಸಂತೋಷ ಮಠಪತಿ ಮುಂತಾದವರು ಪಾಲ್ಗೊಂಡಿದ್ದರು.

# ಸ್ತ್ರೀ ಪುರುಷ ಸಮಾನತೆಯ ಸಮಾಜದ ಅಗತ್ಯ





**ಬನಹಟ್ಟಿ :** ಇಂದು ಪುರುಷ ಪ್ರಧಾನ ಮತ್ತು ಮಹಿಳಾ ಪ್ರಧಾನ ಸಮಾಜವನ್ನು ನಿರ್ಮಾಣ ಮಾಡುವ ಬದಲು, ಪುರುಷ ಮತ್ತು ಮಹಿಳೆಯರ ಸಮಾನತೆಯ ಸಮಾಜದ ಅಗತ್ಯವಿದೆ ಎಂದು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ರೋಶನಿ ಗೌಡ ತಿಳಿಸಿದರು.

ಅವರು ಭಾನುವಾರ ಇಲ್ಲಿನ ಭದ್ರನವರ ಕಲ್ಯಾಣ ಮಂಟಪದಲ್ಲಿ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ರಬಕವಿ ಬನಹಟ್ಟಿ ತಾಲ್ಲೂಕು ಶಾಖೆಯ ಉದ್ಘಾಟನೆ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಮಾರಂಭದಲ್ಲಿ ಮಾತನಾಡಿದರು.

ನಾವು ನಮ್ಮ ಸವಾಲು, ಸಮಸ್ಯೆ, ಕೌಟುಂಬಿಕ ಜೀವನ, ಆರೋಗ್ಯ ಹಾಗೂ ವೈಯಕ್ತಿಕ ಸಮಸ್ಯೆಗಳನ್ನು ಬದಿಗೊತ್ತಿ ಸೇವೆ ಸಲ್ಲಿಸಬೇಕಾಗುತ್ತದೆ. ಮಹಿಳಾ ನೌಕರರ ಸಮಸ್ಯೆ ಮತ್ತು ಸವಾಲುಗಳನ್ನು ಸರ್ಕಾರದ ಗಮನಕ್ಕೆ ತರುವ ದಿಶೆಯಲ್ಲಿ ಸಂಘಟನೆ ಬಹಳಷ್ಟು ಮುಖ್ಯವಾಗಿದೆ. ರಾಜ್ಯದ ಎಂಭತ್ತಕ್ಕೂ ಹೆಚ್ಚು ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ನೌಕರರು ಸ್ವಾಭಿಮಾನದಿಂದ, ಧೈರ್ಯದಿಂದ ಕಾರ್ಯ ನಿರ್ವಹಿಸಲು ಸಂಘಟನೆ ಮುಖ್ಯವಾಗಿದೆ. ರಾಜ್ಯದ ಬೇರೆ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಸಂಘಟನೆ ಉದ್ಘಾಟನೆಯಾಗುತ್ತಿದೆ. ರಾಜ್ಯದಲ್ಲಿ ಶಕ್ತಿ ಶಾಲಿ ಸಂಘವನ್ನು ನಿರ್ಮಾಣ ಮಾಡಲು ಎಲ್ಲರ ಸಹಕಾರ ಮುಖ್ಯವಾಗಿದೆ ಎಂದು ರೋಶನಿ ಗೌಡ ತಿಳಿಸಿದರು.

ಶಾಸಕ ಸಿದ್ದು ಸವದಿ ನೂತನ ಘಟಕವನ್ನು ಉದ್ಘಾಟಿಸಿ ಮಾತನಾಡಿ, ಯಾವುದೆ ನ್ಯಾಯಯುತವಾದ ಬೇಡಿಕೆಗಳನ್ನು ಪಡೆದುಕೊಳ್ಳಲು ಸಂಘಟನೆ ಮುಖ್ಯವಾಗಿದೆ. ಮಹಿಳೆಯರ ವಿರುದ್ಧದ ದೌರ್ಜನ್ಯಗಳ ವಿರುದ್ಧ ಹೋರಾಟಕ್ಕಾಗಿ ಸಂಘಟನೆ ಅಗತ್ಯವಾಗಿದೆ. ಮಹಿಳೆಯರಿಗೆ ಸಮಾನತೆಯನ್ನು ನೀಡುವುದರ ಜೊತೆಗೆ ಅವರನ್ನು ಗೌರವಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ತಹಶೀಲ್ದಾರ್ ಗಿರೀಶ ಸ್ವಾದಿ, ರಬಕವಿ ಬನಹಟ್ಟಿ ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ. ಪಿಎಸ್ಐ ಶಾಂತಾ ಹಳ್ಳಿ, ತಾಲ್ಲೂಕು ಘಟಕದ ಅಧ್ಯಕ್ಷೆ ರಾಜಶ್ರೀ ಧುತ್ತರಗಿ, ಕಾರ್ಯದರ್ಶಿ ಶೈಲಜಾ ಮಿರ್ಜಿ ಮಾತನಾಡಿದರು.

ಸಂಘಟನೆಯ ಪದಾಧಿಕಾರಿಗಳಾದ ನಿರ್ಮಲಾ ಪತ್ತಾರ, ಸುಜಾತಾ ಎಂ, ಗಿರಿಜಾ ವಾಬನ್ನವರ, ಬಸವರಾಜ ಹನಗಂಡಿ, ರೇಣುಕಾ ಡಿಗ್ಗಿ,

ಶಾಂತಾ ಕೂಗಾಟೆ, ಟಿ. ಡಿ. ಮರೆಗುದ್ದಿ, ಜೆ.ಎಸ್. ಕಟ್ಟಿಮನಿ,

ಭಾಗ್ಯಶ್ರೀ ಸ್ವಾದಿ, ಸಂತೋಷಿಮಾ ರಾಮದುರ್ಗ ಸೇರಿದಂತೆ ರಬಕವಿ ಬನಹಟ್ಟಿ ತಾಲ್ಲೂಕಿನ ವಿವಿಧ ಇಲಾಖೆಗಳ ಮಹಿಳಾ ನೌಕರರು ಸಮಾರಂಭದಲ್ಲಿ ಭಾಗವಹಿಸಿದ್ದರು.

# ಬಾಗಲಕೋಟೆ ಜಿಲ್ಲಾ 12 ನೇ ಕ. ಸಾ. ಸ. ಸರ್ವಾಧ್ಯಕ್ಷರಾಗಿ ಡಾ. ವೈ.ಎಂ.ಯಾಕೊಳ್ಳಿ ಆಯ್ಕೆ



**ಬಾಗಲಕೋಟೆ :** ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಸಾಹಿತಿ ಡಾ. ವೈ. ಎಂ. ಯಾಕೊಳ್ಳಿ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಶಿವಾನಂದ ಶೆಲ್ಲಿಕೇರಿ ಅವರು ತಿಳಿಸಿದ್ದಾರೆ.

ಡಾ. ಯಾಕೊಳ್ಳಿ ಅವರು ಮೂಲತಃ ಬಾದಾಮಿ ತಾಲೂಕಿನ ನೀರಬೂದಿಹಾಳ ಗ್ರಾಮದವರು. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಕಾಂಡ ವಾಗ್ಮೀಗಳಾಗಿ ಕರ್ನಾಟಕ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ ತಮ್ಮ ವಿದ್ವತ್ ಪೂರ್ಣ ಭಾಷಣಗಳಿಂದ ಜನಮನ್ನಣೆ ಗಳಿಸಿದ್ದಾರೆ. ಕಥೆ, ಕಾವ್ಯ, ಚುಟುಕು, ಹೈಕು, ನಾಟಕ, ವಿಮರ್ಶೆ, ಜಾನಪದ ಪ್ರಕಾರಗಳು ಸೇರಿದಂತೆ ಕನ್ನಡ ಸಾರಸ್ವತ ಲೋಕಕ್ಕೆ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ನೀಡಿದ್ದಾರೆ. ಇವರ ಸುದೀರ್ಘ ಸಾಹಿತ್ಯ ಸೇವೆಯನ್ನು ಪರಿಗಣಿಸಿ, ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಬಾದಾಮಿ ಇವರ ಸಹಯೋಗದಲ್ಲಿ ಮಾರ್ಚ್ 22 ಮತ್ತು 23 ರಂದು ಬಾದಾಮಿ ತಾಲೂಕಿನ ನೀರಬೂದಿಹಾಳದಲ್ಲಿ ನಡೆಯುವ ಬಾಗಲಕೋಟೆ ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಎರಡು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ಧ್ವಜಾರೋಹಣ, ಸಮ್ಮೇಳನ ಅಧ್ಯಕ್ಷರ ಮೆರವಣಿಗೆ, ಉದ್ಘಾಟನೆ, ಸಾಹಿತ್ಯ, ಕಲೆ, ಇತಿಹಾಸ, ಸಂಸ್ಕೃತಿ, ಜಾನಪದ, ಕೃತಿ ಲೋಕಾರ್ಪಣೆ, ಸಮೂಹ ಮಾಧ್ಯಮ, ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ, ಕವಿಗೋಷ್ಠಿ, ಸಾಧಕರ ಸನ್ಮಾನ, ಮುಂತಾದ ವಿಷಯಗಳ ಮೇಲೆ ಗೋಷ್ಠಿ , ಉಪನ್ಯಾಸ , ಸಂವಾದ ಹಾಗೂ ಪ್ರಸಾರ ಕಾರ್ಯಕ್ರಮಗಳು ನಡೆಯುತ್ತವೆ.

ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಡಾ. ಚಂದ್ರಶೇಖರ ಕಾಳನ್ನವರ, ಕೋಶಾಧ್ಯಕ್ಷ ಡಾ. ಸಿ. ಎಂ. ಜೋಶಿ, ಸಂಘಟನಾ ಕಾರ್ಯದರ್ಶಿಗಳಾದ ಶಂಕರ ಹೂಲಿ, ಸಿ.ಎಸ್.ನಾಗನೂರ, ಬಾದಾಮಿ ತಾಲೂಕ ಕಸಾಪ ಅಧ್ಯಕ್ಷ ಬಿ.ಎಫ್.ಹೊರಕೇರಿ, ತಾಲೂಕ ಕಾರ್ಯದರ್ಶಿ ಮಹಾಂತೇಶ ಇಳಗೇರಿ, ರಾಮು ಸಾರವಾಡ, ಪಿ.ಎಸ್.ನೀಲಗುಂದ ಕೆರೂರು ಹೊಬಳಿ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಪೂಜಾರ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸಿದ್ಧಾರೂಢರು ಭಕ್ತರ ಪಾಲಿನ ಕಾಮಧೇನು: ಸಹಜಾನಂದ ಸ್ವಾಮಿಜಿ

**ಮಹಾಲಿಂಗಪುರ:** ಜಗದ್ಗುರು ಸಿದ್ಧಾರೂಢರು ಅನನ್ಯ ಭಕ್ತಿ, ಶ್ರದ್ಧೆಯುಳ್ಳ ಭಕ್ತರ ಪಾಲಿಗೆ ಕಾಮಧೇನು ಕಲ್ಪವೃಕ್ಷರಾಗಿದ್ದಾರೆ ಎಂದು ಸಹಜಾನಂದ ಸ್ವಾಮಿಜಿ ಹೇಳಿದರು.



ಪಟ್ಟಣದ ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮದಲ್ಲಿ ಶನಿವಾರ ರಾತ್ರಿ ಜರುಗಿದ 213 ನೇ ವಾರದ ಸತ್ಸಂಗ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಜಾತ್ಯಾತೀತ ಜಗದ್ಗುರು ಸಿದ್ಧಾರೂಢರು ಪವಾಡ ಪುರುಷರಾಗಿದ್ದು ಅವರ ಕಥಾಮೃತ ರಚನೆಯಾಗಿ ಶತಮಾನೋತ್ಸವ ಕಂಡಿದೆ. ಸಿದ್ಧಾರೂಢರಲ್ಲಿ ಅಪಾರವಾದ ನಂಬಿಕೆ, ವಿಶ್ವಾಸ, ಭಕ್ತಿ ಇಟ್ಟು ನಿತ್ಯ ಸಿದ್ಧಾರೂಢರ ಚರಿತ್ರೆ ಪಾರಾಯಣ ಮಾಡುವುದರಿಂದ ಸಕಲ ಪಾಪಗಳು ಪರಿಹಾರವಾಗಿ ಭಕ್ತರು ಬಯಸಿದ ಇಷ್ಟಾರ್ಥಗಳು ನೆರವೇರುತ್ತವೆ ಎಂದರು.

ಆಶ್ರಮದ ಉತ್ತರಾಧಿಕಾರಿ ಸಿದ್ಧಾನಂದ ಭಾರತಿ ಸ್ವಾಮಿಜಿ, ಟ್ರಸ್ಟ್ ಕಮೀಟಿ ಧರ್ಮದರ್ಶಿ ಮಲ್ಲೇಶಪ್ಪ ಕಟಗಿ, ಸಿದ್ರಮಯ್ಯ ಗೋಠೆ ಅವರು ಸಿದ್ಧಾರೂಢರ ಚರಿತ್ರೆಯ 45 ನೇ ಅಧ್ಯಾಯವನ್ನಾಧರಿಸಿ ಮಾತನಾಡಿದರು.

ಜಾನಪದ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾದ ಗಂಗಪ್ಪ ಕರಡಿ, ನೂತನ ನ್ಯಾಯವಾದಿಗಳಾಗಿ ನೇಮಕರಾದ ಶಿವಾನಂದ ಹುಣಶ್ಯಾಳ, ಮಹಾಲಿಂಗ ಗೋಕಾಂವಿ ಅವರನ್ನು ಆಶ್ರಮದ ವತಿಯಿಂದ ಸನ್ಮಾನಿಸಲಾಯಿತು. 213 ನೇ ವಾರದ ಸತ್ಸಂಗದ ದಾಸೋಹಿ ಸಂಜು ಗುರುಪಾದಪ್ಪ ಹಿಕಡಿ ಅವರು ಸರ್ವ ಪೂಜ್ಯರನ್ನು ಸನ್ಮಾನಿಸಿ ಗೌರವಿಸಿದರು. ಬುದ್ನಿ ಪಿ.ಡಿ. ಮಹಾಲಿಂಗೇಶ್ವರ ಭಜನಾ ಮೇಳದವರಿಂದ ಭಜನಾ ಕಾರ್ಯಕ್ರಮ ಜರುಗಿತು.

ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ಡಾ. ಬಿ. ಡಿ. ಸೋರಗಾಂವಿ, ಖಜಾಂಚಿ ಅಲ್ಲಪ್ಪ ಗುಂಜಿಗಾಂವಿ, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಮೋರೆ, ಧರ್ಮದರ್ಶಿಗಳಾದ ಲಕ್ಕಪ್ಪ ಚಮಕೇರಿ, ಚೇತನ ಹಾದಿಮನಿ, ಗೋಲೇಶ ಅಮ್ಮಣಗಿ, ಸದ್ಭಕ್ತರಾದ ಬಸವರಾಜ ಕರೆಹೊನ್ನ, ಎಸ್. ಕೆ. ಗಿಂಡೆ, ಚನ್ನಬಸು ಹುರಕಡ್ಲಿ, ಯಲ್ಲನಗೌಡ ಪಾಟೀಲ, ಹಣಮಂತ ಮೀರಾಪಟ್ಟಿ, ಮಹೇಶ ಇಟಕನ್ನವರ, ಶಿವಾನಂದ ಪಟ್ಟೇದ, ಶ್ರೀಶೈಲಪ್ಪ ಉಳ್ಳೇಗಡ್ಡಿ, ಉದ್ದಪ್ಪ ನೀಲಾರಿ, ಮೆಹಬೂಬ ಸನದಿ, ಸಂಗಪ್ಪ ಮುತ್ನಾಳ, ಹುಮಾಯೂನ ಸುತಾರ, ಶಂಕರ ನೀಲಾರಿ, ಚನ್ನಪ್ಪ ಗೂಗಾಡ, ಚನ್ನಪ್ಪ ಚಂಡೋಲ, ಮಲ್ಲಪ್ಪ ಯಾದವಾಡ, ಕುಮಾರ ಉಳ್ಳಾಗಡ್ಡಿ, ಶಿವಾನಂದ ತೇಲಿ, ಸದಾಶಿವ ಮಠಪತಿ, ಸಿದ್ದು ಧಡೂತಿ, ಆನಂದ ಕೋಲಾರ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ದೇಶಿ ತಳಿಯ ಬೀಜ ಸಂರಕ್ಷಿಸಿ ಉತ್ತೇಜಿಸಲು ಕಾರ್ಯ ಯೋಜನೆ: ರೂಪಾ

**ವಿಜಯಪುರ :** ರೈತರು ದೇಶಿತಳಿ ಬೀಜಗಳನ್ನು ಸಂರಕ್ಷಿಸಿ, ಉತ್ತೇಜನ ನೀಡಲು ಸರಕಾರ ಕಾರ್ಯ ಯೋಜನೆ ರೂಪಿಸಿದೆ ಎಂದು ಜಂಟಿ ಕೃಷಿ ನಿರ್ದೇಶಕಿ ರೂಪಾ ಎಲ್. ಹೇಳಿದರು.

ವಿಜಯಪುರ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಗುರುವಾರ ದೇಶಿತಳಿ ಸಂರಕ್ಷಿಸುತ್ತಿರುವ ರೈತರಿಗೆ ದೇಶಿತಳಿಗಳ ಸಂರಕ್ಷಣೆ ಮತ್ತು ಉತ್ತೇಜನ ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮುಖ್ಯಮಂತ್ರಿಗಳು ಕಳೆದ ವರ್ಷದ ಆಯವ್ಯಯ ಭಾಷಣದಲ್ಲಿ ಕಣ್ಮರೆಯಾಗುತ್ತಿರುವ ಹಾಗೂ ನಶಿಸಿ ಹೋಗುತ್ತಿರುವ ಸ್ಥಳೀಯ ಬೆಳೆಗಳನ್ನು ಸಂಗ್ರಹಿಸಲು ಮತ್ತು ಸಂರಕ್ಷಿಸುವ ಉದ್ದೇಶದಿಂದ ಒಂದು ಸ್ಥಳೀಯ ಬೀಜ ಬ್ಯಾಂಕ್ ಸ್ಥಾಪಿಸಲಾಗುವುದೆಂದು ಘೋಷಿಸಿದ್ದು, ಅದರಂತೆ ಜಿಲ್ಲೆಯ ದೇಶಿಬೀಜಸಂಗ್ರಹಿಸಿದರೈತರನ್ನುಗುರುತಿಸಿ, ಅವರಿಗೆ ಒಂದು ದಿನದ ಕಾರ್ಯಾಗಾರದ ಮೂಲಕ ಸ್ಥಳೀಯ ಬೀಜ ಸಂರಕ್ಷಿಸುವ ಹಾಗೂ ಅವುಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ ಎಂದರು.

ಕೃಷಿ ಮಹಾವಿದ್ಯಾಲಯ ಡೀನ್ ಡಾ. ಅಶೋಕ ಎಸ್. ಸಜ್ಜನ ಮಾತನಾಡಿ, ಹಿಂದೆ ರೈತರು ತಾವು ಕಾಪಾಡಿಕೊಂಡು ಬಂದ ಜವಾರಿ ತಳಿ ಬೀಜಗಳನ್ನು ಬಳಸಿ ವ್ಯವಸಾಯ ಮಾಡುತ್ತಿದ್ದರು. ಆದರೆ 1960–70 ದಶಕದಲ್ಲಾದ ಹಸಿರು ಕಾಂತ್ರಿಯಿಂದಾಗಿ, ಹೈಬ್ರೀಡ್ ಬೀಜದ ತಳಿಗಳನ್ನು ಅಭಿವೃದ್ಧಿಪಡಿಸಿ ರಸಗೊಬ್ಬರ,



ಕೀಟನಾಶಕಗಳ ಬಳಕೆ ಮಾಡಿ ಇಳುವರಿ ಹೆಚ್ಚಳ ಮಾಡಿ, ಬೆಳೆಯುತ್ತಿರುವ ಜನ ಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆ ಹೆಚ್ಚು ಮಾಡಲಾಯಿತು. ರೈತರಿಗೆ ಮತ್ತು ದೇಶಿ ತಳಿ ಬೀಜ ಸಂರಕ್ಷಣೆ ಮಹತ್ವ ಕುರಿತು ಅರಿವು ಮೂಡಿಸುತ್ತಿರುವದು ಒಳ್ಳೆಯ ಬೆಳವಣಿಗೆಯಾಗಿದೆ ಎಂದರು.

ಸಹ ವಿಸ್ತರಣಾ ನಿರ್ದೇಶಕ ಡಾ. ರವೀಂದ್ರ ಬೆಳ್ಳಿ ಮಾತನಾಡಿ, ರೈತರಿಗೆ ಬಿತ್ತನೆಗೆ ಉತ್ತಮ ಗುಣಮಟ್ಟದ ಬೀಜ ಮೂಲಾಧಾರವಾಗಿದೆ. ಕಣ್ಮರೆಯಾಗುತ್ತಿರುವ ತಳಿ ಗಳನ್ನೊಳಗೊಂಡಂತೆ, ಆಯಾ ಸ್ಥಳೀಯ ಪ್ರದೇಶಕ್ಕೆ ಸೂಕ್ತವಾದ ದೇಶಿ ತಳಿಗಳ ಗುರುತಿಸುವಿಕೆ ಹಾಗೂ ಸಂರಕ್ಷಣೆ ಮಾಡಬೇಕು, ದೇಶಿ ತಳಿಗಳನ್ನು ಹಿಂದಿನಿಂದಲೂ ಸಂರಕ್ಷಿಸಿ, ಕೃಷಿ ಮಾಡುತ್ತಿರುವ ರೈತರಿಗೆ ಸೂಕ್ತ ಬೆಂಬಲ ನೀಡುವ ಮೂಲಕ ದೇಶಿ ತಳಿಗಳ ಬೇಸಾಯಕ್ಕೆ ಉತ್ತೇಜನ ನೀಡಬೇಕೆಂದರು.

ಜಿಲ್ಲಾ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕ ಡಾ. ಬಾಲರಾಜ ಬಿರಾದಾರ ಪ್ರಾಸ್ತಾವಿಕವಾಗಿ ಮಾತನಾಡಿ, ರೈತರು ತಲೆತಲಾಂತರದಿಂದ ಬೇಸಾಯ ಮಾಡುತ್ತಾ ಬಂದಿರುವ ದೇಶಿ ಬೀಜಗಳನ್ನು ಉಳಿಸಲು, ಜಿಲ್ಲೆಯಲ್ಲಿ ಈಗಾಗಲೇ ದೇಶಿ ತಳಿಗಳನ್ನು ಸಂರಕ್ಷಿಸುತ್ತಿರುವ ರೈತರನ್ನು ಗುರುತಿಸಿ ತರಬೇತಿ ನೀಡಿ, ಅವರಿಗೆ ದೇಶಿತಳಿ ಬೀಜಗಳನ್ನು ಜನಪ್ರಿಯಗೊಳಿಸಲು ಅನುಕೂಲ ಕಲ್ಪಿಸಲಾಗುವುದೆಂದರು.

ಉಪ ಕೃಷಿ ನಿರ್ದೇಶಕ ಡಾ. ಪ್ರಕಾಶ ಚವ್ಹಾಣ ರೈತರಿಗೆ ತರಬೇತಿ ನಂತರ ದೇಶಿ ತಳಿ ಉತ್ತೇಜಿಸಲು ಇರುವ ಅವಕಾಶಗಳ ಕುರಿತು ಕೂಲಂಕುಷವಾಗಿ ವಿವರಿಸಿದರು.

ಕಾರ್ಯಾಗಾರದಲ್ಲಿ ವಿವಿಧ ಭಾಗಗಳಿಂದ ಆಗಮಿಸಿದ ರೈತರು ತಾವು ಸಂಗ್ರಹಿಸಿದ ವಿವಿಧ ಬೀಜ ಮಾದರಿಗಳಾದ ಜವಾರಿ ಹಸಿರು, ಕೆಂಪು, ಕರಿ ಕಡಲೆ, ಕರಿಗೋಧಿ, ಕೆಂಪು, ಬಿಳಿ ಗುಲಗಂಜಿ, ಕರಿ, ಕೆಂಪು, ರತ್ನ ಚೂಡಾಮಣಿ ಭತ್ತ, ತುಪ್ಪದ ತಿಪ್ರಿಕಾಯಿ, ಅಜವಾನ, ಆಗಸೆ, ವಿವಿಧ ದೇಶಿ ಸಿರಿಧಾನ್ಯ ಬೀಜಗಳು, ಹಾಲನವಣಿ, ಅಶ್ವಗಂದ ಸೇರಿದಂತೆ ನೂರು ವರ್ಷಗಳಿಂದ ಕಾಯ್ದಿಟ್ಟ ವಿವಿಧ ಜವಾರಿ ಬೀಜಗಳನ್ನು ಪ್ರದರ್ಶಿಸಿದ್ದರು.


ಸಸ್ಯ ಸಂರಕ್ಷಣೆ ಕುರಿತು ಉಪನ್ಯಾಸ ನೀಡಿದ ಕೆವ್ಹಿಕೆ ಹಿರಿಯ ವಿಜ್ಞಾನಿ ಡಾ. ಎಸ್. ಎಮ್. ವಸ್ತ್ರದ ದೇಶಿ ಬೀಜಕ್ಕೆ ತಗಲುವ ವಿವಿಧ ಸಸ್ಯ ಸಂರಕ್ಷಣೆ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ಎಸ್. ಟಿ. ಪಾಟೀಲ, ಸಿದ್ದಪ್ಪ ಭೂಸಗೊಂಡ, ಮಲ್ಲೇಶಪ್ಪ ಕಲ್ಯಾಣಶೆಟ್ಟಿ, ಮುದ್ದುಗೌಡ ಪಾಟೀಲ, ಶಿವಾನಂದ ಮಂಗಾನವರ, ಬಸೀರ ಅಹಮ್ಮದ ಬಳಿಗಾಗ, ಶೆಟ್ಟೆಪ್ಪ ನಾವಿ, ಮಲ್ಲು ಗೂಡ್ಲ, ಭಾರತಿ ಮೆಂಡೆಗಾರ, ಮಂಜುನಾಥ ದೊಡಮನಿ, ಕೃಷಿ ಇಲಾಖೆಯ ಅಧಿಕಾರಿಗಳಾದ ಶಿವನಗೌಡ ಪಾಟೀಲ, ಲಿಂಗರಾಜ ತಾಳಿಕೋಟಿ, ಪ್ರಕಾಶ ಕಳಸಗೊಂಡ, ಎಸ್. ಕೆ. ಬಿರಾದಾರ, ಪ್ರಶಾಂತ ಸೈನಿ, ಪಾರ್ವತಿ ಪಾಟೀಲ, ವಿಜಯಲಕ್ಷ್ಮೀ ಚವ್ಹಾಣ, ಗೀತಾ ಬಜಂತ್ರಿ, ಲಕ್ಷ್ಮಿ ?ಮೀ ಕಾಮಗೊಂಡ, ಎಮ್. ಆರ್. ಮೈದರಗಿ, ಸಿ. ಎಸ್. ಗವಿಮಠ, ಸಾಗರ ಬಾಗೇವಾಡಿ, ತುಕಾರಾಮ ನಾಯಕ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ನೂರು ದೇಶಿ ಬೀಜ ಸಂರಕ್ಷಿಸುತ್ತಿರುವ ರೈತಬಾಂಧವರು ಭಾಗವಹಿಸಿದ್ದರು. ಬಾಲರಾಜ ಬಿರಾದಾರ ಸ್ವಾಗತಿಸಿದರು, ಲಿಂಗರಾಜ ತಾಳಿಕೋಟಿ ನಿರೂಪಿಸಿದರು. ಶಿವನಗೌಡ ಪಾಟೀಲ ವಂದಿಸಿದರು.

# ಬಂಜಾರ ಜನಜಾಗೃತಿ ಸೇವಾ ರಥಯಾತ್ರೆಗೆ ಭವ್ಯ ಸ್ವಾಗತ

**ವಿಜಯಪುರ :** ರಾಷ್ಟ್ರೀಯ ಗೋರಸೇನಾ ಸಂಘಟನೆ ವತಿಯಿಂದ ಬಂಜಾರ ಸಮುದಾಯದ ಏಕತೆ, ಅಸ್ಮಿತೆ ಮತ್ತು ಜನಜಾಗೃತಿಗಾಗಿ ಬೀದರನಿಂದ ಬೆಂಗಳೂರು ತನಕ ಸೇವಾ ರಥಯಾತ್ರೆ ಹಮ್ಮಿಕೊಂಡಿದೆ. ಅದರ ಪ್ರಯುಕ್ತ ರಥಯಾತ್ರೆ ವಿಜಯಪುರ ಜಿಲ್ಲೆಗೆ ಆಗಮಿಸಿದ್ದ ಸಂದರ್ಭದಲ್ಲಿ ಜಿಲ್ಲೆಯ ಸಮಸ್ತ ಬಂಜಾರ ಸಮಾಜ ಸಿಂದಗಿಯ ನಾಕಾ ಬಳಿ ರಥಯಾತ್ರೆಗೆ ಭವ್ಯ ಮೆರವಣಿಗೆ ಮೂಲಕ ಸ್ವಾಗತ ನೀಡಿ ವಿಜಯಪುರ ಜಿಲ್ಲೆಯಲ್ಲಿ ರಥಯಾತ್ರೆಗೆ ಚಾಲನೆ ನೀಡಿದರು.

ರಥಯಾತ್ರೆ ವಿಜಯಪುರ ನಗರದಲ್ಲಿ ಸಂಚರಿಸಿ ಇಲ್ಲಿರುವ ಮಹಾನ ವ್ಯಕ್ತಿಗಳ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡುವ ಮೂಲಕ ಸಾಗಿತು. ಬಂಜಾರ ಸಮಾಜದ ಪ್ರಮುಖರು ಹಾಗೂ ನಗರದ ಖ್ಯಾತ ವೈದ್ಯರಾದ ಡಾ.ಬಾಬುರಾಜೇಂದ್ರ ಬಿ ನಾಯಿಕ ಮಾಧ್ಯಮಗಳೊಂದಿಗೆ ಮಾತನಾಡಿ ಬೀದರನಿಂದ ಹೊರಟಿರುವ



ಬಂಜಾರ ಜನಜಾಗೃತಿ ಸೇವಾ ರಥಯಾತ್ರೆ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಕಾರ್ಯಕ್ರಮದೊಂದಿಗೆ ಮುಕ್ತಾಯವಾಗಲಿದೆ, ಬಂಜಾರ ಸಮಾಜದ ಸ್ವಾಭಿಮಾನಕ್ಕಾಗಿ, ಏಕತೆಗಾಗಿ, ಅಸ್ಮಿತೆಗಾಗಿ ನಡೆಯುತ್ತಿರುವ ಈ ಯಾತ್ರೆಗೆ ವಿಜಯಪುರ ಸಮಸ್ತ ಬಂಜಾರ ಸಮಾಜದ ಪರವಾಗಿ ತುಂಬು ಹೃದಯದಿಂದ ಸ್ವಾಗತಿಸಿದ್ದೇವೆ ಮತ್ತು ಈ ಜನಜಾಗೃತಿ ರಥಯಾತ್ರೆ ಆಯೋಜನೆ ಮಾಡಿರುವ ರಾಷ್ಟ್ರೀಯ ಗೋರಸೇನಾ ಸಂಘಟನೆಗೆ ವಿಜಯಪುರ ಜಿಲ್ಲೆಯ ಬಂಜಾರ ಸಮಾಜದ ಪರವಾಗಿ ಅಭಿನಂದನೆಗಳನ್ನು ಮತ್ತು ಧನ್ಯವಾದಗಳನ್ನು ಸಮರ್ಪಿಸಿದರು.

ರಥಯಾತ್ರೆ ವಿಜಯಪುರ ಜಿಲ್ಲೆಗೆ ಆಗಮಿಸಿದ್ದ ಸಂದರ್ಭದಲ್ಲಿ ಪರಮಪೂಜ್ಯ ಜಗನು ಮಹಾರಾಜ, ಧನಸಿಂಗ ಮಹಾರಾಜ, ಕೆಸರಟ್ಟಿಯ ಸೋಮಲಿಂಗ ಮಹಾಸ್ವಾಮಿಗಳು, ತೊರವಿಯ ಗೋಪಾಲ ಮಹಾರಾಜ,ಭೀಮಸಿಂಗ್ ಮಹಾರಾಜ ಸೇರಿದಂತೆ ಅನೇಕ ಪರಮಪೂಜ್ಯರು, ಸ್ವಾಮೀಜಿಗಳು ರಥಯಾತ್ರೆಯ ಮುಂದಿನ ಸಂಚಾರಕ್ಕೆ ಚಾಲನೆ ನೀಡಿದರು.

ಸ್ವಾಗತ ಕಾರ್ಯಕ್ರಮದ ನೇತೃತ್ವ ಡಾ ಬಾಬುರಾಜೇಂದ್ರ ನಾಯಿಕ್ ವಹಿಸಿದ್ದರು. ಮಾಜಿ ಶಾಸಕರಾದ ದೇವಾನಂದ ಚವಾಣ್, ಮಹಾನಗರ ಪಾಲಿಕೆ ಸದಸ್ಯರಾದ ರಾಜು ಚವಾಣ್, ಗೋರಸೇನಾ ಸಂಘಟನೆಯ ರಾಜ್ಯಾಧ್ಯಕ್ಷರಾದ ಬಾಳಾಸಾಹೇಬ, ಜಿಲ್ಲಾಧ್ಯಕ್ಷರಾದ ಅರುಣ ನಾಯಿಕ, ಪ್ರೊ.ಡಾ ಬಾಬು ಲಮಾಣಿ, ಪ್ರೊ.ಡಾ ನಾರಾಯಣ ಪವಾರ, ಪ್ರೊ.ಸಂಗೀತಾ ನಾಯಿಕ, ಬಂಜಾರ ಸಮಾಜದ ಪ್ರಮುಖರಾದ ಅಪ್ಪು ರಾಠೋಡ್, ರವಿ ರಾಠೋಡ್, ರಾಕೇಶ ರಜಪೂತ ಗುಲಾಬ್ ಚವಾಣ್,ಪ್ರಕಾಶ್ ಚವಾಣ್,ಸುರೇಶ್ ಬಿಜಾಪುರ,ಚಂದ್ರು ರಾಥೋಡ್. ರಾಜು ಖಂಡಸಾರಿ,ಜಯರಾಮ್ ಪೂಜಾರಿ,ಅರವಿಂದ್ ಲಮಾಣಿ ಸೇರಿದಂತೆ ಅನೇಕ ಜನ ರಥಯಾತ್ರೆಯ ಶೋಭಾಯಾತ್ರೆಯಲ್ಲಿ ಉಪಸ್ಥಿತರಿದ್ದರು.

# ಅಥಣಿಗೆ ಕೃಷಿ ಕಾಲೇಜು: ತಾಯಿ ಮಕ್ಕಳ ಆಸ್ಪತ್ರೆ: ಶಾಸಕ ಲಕ್ಷ್ಮಣ ಸವದಿ ಬೇಡಿಕೆ ಈಡೇರಿಸಿದ ಸಿಎಂ ಸಿದ್ದರಾಮಯ್ಯ

**ಅಥಣಿ :** ಮತಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ ಅವರ ಕಾರ್ಯವೈಖರಿ ಕ್ಷೇತ್ರದ ಅಭಿವೃದ್ಧಿ ಯೋಜನೆಗಳ ಮುಂದಾಲೋಚನೆಯ ಚರ್ಚೆ ರಾಜ್ಯಾದ್ಯಂತ ರಾರಾಜಿಸುತ್ತಿವೆ ಏಕೆಂದರೆ ಮಂಡಿಸಲಾದ ಬಜೆಟ್ ನಲ್ಲಿ ಅಥಣಿ ಮತಕ್ಷೇತ್ರಕ್ಕೆ ಬಂಗಾರದ ತಟ್ಟೆ ನೀಡಲಾಗಿದೆ.

ಹೌದು : ಕೆಲವು ತಿಂಗಳು ಹಿಂದೆಯಷ್ಟೇ ತಾಲೂಕಿನಲ್ಲಿ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರ ಸತತ ಪ್ರಯತ್ನದ ಫಲವಾಗಿ ನಾಡ ದೊರೆ ಎನಿಸಿಕೊಂಡಿರುವ ರಾಜ್ಯದ ಮುಖ್ಯಮಂತ್ರಿ. ಉಪ ಮುಖ್ಯಮಂತ್ರಿಗಳು ಹಾಗೂ ಸಚಿವರುಗಳು ಆದಿಯಾಗಿ ತಾಲೂಕಿನ ಕೊಕಟನೂರು ಗ್ರಾಮದಲ್ಲಿ ನೂತನ ಪಶು ವೈದ್ಯಕೀಯ ಕಾಲೇಜು ಉದ್ಘಾಟಿಸಿದ್ದರು ಆ ಸಂದರ್ಭದಲ್ಲಿ ಶಾಸಕ ಲಕ್ಷ್ಮಣ ಸವದಿ ಅವರು ಇಬ್ಬರು ನಾಯಕರ ಎದುರು ಒಂದೇ ಸೂರಿನಲ್ಲಿ ದೃಷ್ಟಾಂತ ಕಥೆಯ ಮೂಲಕ ಕೆಲವು ಬೇಡಿಕೆಗಳನ್ನ ಇಟ್ಟಿದ್ದರು. ನನ್ನ ಮಗ ಬಂಗಾರದ ತಟ್ಟೆಯಲ್ಲಿ ಊಟ ಮಾಡೊಡನ್ನ ನನ್ನ ತಾಯಿ ನೋಡಬೇಕು ಅನ್ನೋದೇ ನನ್ನ ಬಯಕೆಯಾಗಿದೆ ಆ ಬಯಕೆ ತಾವು ಈಡೇರಿಸಿ ಕೊಡಬೇಕು ಎಂದು ತಿಳಿಸಿದ್ದರು. ಅವರ ಮಾತಿಗೆ ಸ್ಪಂದಿಸಿದ ಮುಖ್ಯಮಂತ್ರಿ



ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಶಾಸಕ ಲಕ್ಷ್ಮಣ ಸವದಿ ಅವರು ಯಾವುದೇ ಮಂತ್ರಿ ಪದವಿಗೆ ಅಪೇಕ್ಷೆ ಪಡದೆ ನನ್ನ ಮತಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿವೆ ಆ ಕಾರ್ಯಗಳು ತಾವು ಮಾಡಿಕೊಡಬೇಕು ಎಂದಿದ್ದರು. ಆ ಸಮಯದಲ್ಲಿ ಸಿಎಂ ಹಾಗೂ ಡಿಸಿಎಂ ಅವರು ನಾವು ಲಕ್ಷ್ಮಣ ಸವದಿ ಅವರ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುತ್ತೇವೆ ಎಂದು ಭರವಸೆ ನೀಡಿದ್ದರು ಅಥಣಿ ತಾಲೂಕಿಗೆ ಪಶು ವೈದ್ಯಕೀಯ ಕಾಲೇಜು ಈಗಾಗಲೇ ಆರಂಭವಾಗಿದ್ದು, ಅಮ್ಮಾಜೇಶ್ವರಿ ಯಾತ ನೀರಾವರಿ ಯೋಜನೆ ಕಾಮಗಾರಿ ಪ್ರಗತಿಯಲ್ಲಿದೆ, ಇಷ್ಟೇ ಅಲ್ಲದೆ ಅಥಣಿ ತಾಲೂಕಿನಲ್ಲಿ ಇನ್ನೂ

ಹಲವಾರು ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿ ಇದ್ದು ಹಾಗೂ ಇಂದು ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟನಲ್ಲಿ ಅಥಣಿ ಮತಕ್ಷೇತ್ರಕ್ಕೆ ಕೃಷಿ ಕಾಲೇಜು ಘೋಷಣೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆ ಸ್ಥಾಪನೆಗೆ ಅನುಮೋದನೆ ನೀಡಿದ ರಾಜ್ಯದ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ ಇವರಿಗೆ ಸಮಸ್ತ ಅಥಣಿ ಮತಕ್ಷೇತ್ರದ ಜನತೆಯ ಪರವಾಗಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅಭಿಮಾನಿ ಬಳಗದ ಶಿವಾನಂದ ದಿವಾನಮಳ. ರಾಮನಗೌಡ ಪಾಟೀಲ. ಚಿಕ್ಕೋಡಿ ಜಿಲ್ಲಾ ವಕ್ಫ್ ಸಲಹಾ ಸಮಿತಿ ಉಪಾಧ್ಯಕ್ಷ ಆಸೀಫ್ ತಾಂಬೋಳಿ. ಪ್ರದೀಪ್ ನಂದಗಾಂವ. ಅಂಜುಮನ್ ಸಂಸ್ಥೆಯ ಅಧ್ಯಕ್ಷ ಸೈಯ್ಯದಅಮೀನ್ ಗದ್ಯಾಳ. ಅಮೋಘಸಿದ್ದ ಖೊಬ್ರಿ. ಶಿವು ಗುಡ್ಡಾಪೂರ. ರಮೇಶ ಪಟ್ಟಣ. ಪುರಸಭೆ ಸದಸ್ಯರಾದ ಸಂತೋಷ ಸಾವಡಕರ. ಕಲ್ಲೇಶ ಮಡ್ಡಿ. ಇನ್ನೂಸ್ ಮುಲ್ಲಾ. ಮುಸ್ತಾಕ್ ಮುಲ್ಲಾ. ಜಡೇಪ್ಪಾ ಕುಂಬಾರ. ಶೇಖರ ಕನಕರೆಡ್ಡಿ. ಮಹೇಶ ಕುಟಗನಹಳ್ಳಿ. ಪ್ರಶಾಂತ ಅಕ್ಕೋಳ. ಗಜಾನನ ಜಂಬಗಿ. ಶ್ರೀನಿವಾಸ ಪಟ್ಟಣ. ಮಲ್ಲಿಕಾರ್ಜುನ ಕುಲ್ಲೋಳಿ. ಅಬ್ದುಲ್ ಅಜೀಜ್ ಮುಲ್ಲಾ. ಫೈಸಲ್ ಮೋಮಿನ. ಶಿಲ್ಪಾ ತೊದಲಬಾಗಿ. ರೂಪಾ ಕಾಂಬಳೆ. ಸವಿತಾ ಕಾಂಬಳೆ. ಸೇರಿದಂತೆ ಇನ್ನೂ ಹಲವರು ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಮಹಿಳೆಯರು ಸ್ವಾಭಿಮಾನದ ಸಂಕೇತ: ಕವಿತಾ ಸಿದ್ದಾಪೂರ

**ಮೂಡಲಗಿ :** ಇಂದು ಮಹಿಳೆಯರ ಮೇಲೆ ಅತಿಯಾದ ದೌರ್ಜನ್ಯಗಳು ಮತ್ತು ಶೋಷಣೆಗಳು ನಡೆಯುತ್ತಿದ್ದು, ಅವುಗಳಿಂದ ರಕ್ಷಣೆಯನ್ನು ಪಡೆಯಲು ಮಹಿಳಾ ಸಂರಕ್ಷಣಾ ಕಾನೂನು ನಿಯಮಗಳನ್ನು ಪ್ರತಿಯೊಬ್ಬ ಮಹಿಳೆ ತಿಳಿದುಕೊಳ್ಳುವುದು ಅವಶ್ಯವಿದೆ ಎಂದು ಮೂಡಲಗಿಯ ಆರ್.ಡಿ.ಎಸ್. ಪದವಿ ಕಾಲೇಜಿನ ಉಪನ್ಯಾಸಕಿ ಕವಿತಾ ಸಿದ್ದಾಪೂರ ಹೇಳಿದರು.

ಪಟ್ಟಣದ ಆರ್.ಡಿ.ಎಸ್. ಕಲಾ, ವಾಣಿಜ್ಯ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯದ ಎನ್.ಎಸ್.ಎಸ್. ಮತ್ತು ಮಹಿಳಾ ಸಬಲೀಕರಣ ಘಟಕದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಇಂದು ವೈಜ್ಞಾನಿಕವಾಗಿ ಜಗತ್ತು ಬೆಳೆಯುತ್ತಿದೆ ಅವಕಾಶಗಳು ಅತ್ಯಧಿಕವಾಗಿ



ಹೆಚ್ಚುತ್ತಿದ್ದು ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವುದು ಅವಶ್ಯವಿದೆ. ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡು ತಾನು ಅಬಲೆಯಲ್ಲ ಸಬಲೆ ಎಂದು ಇಂದಿನ ಸಮಾಜಕ್ಕೆ ಮನದಟ್ಟು ಮಾಡಿಕೊಡುವುದು ಅವಶ್ಯವಿದೆ ಎಂದರು.

ಉಪನ್ಯಾಸಕಿ ಲಕ್ಷ್ಮಿ ಬೈಲಾ ಮಾತನಾಡಿ, ಮಹಿಳಾ ಸಮಾನತೆಗಾಗಿ ಭಾರತ ಸರಕಾರ ಹಲವು ಕಾನೂನು ನಿಬಂಧನೆಗಳನ್ನು ಜಾರಿಗೆ ತಂದಿದೆ. ಅವುಗಳ ಅರಿವು ಮಹಿಳೆಗೆ ಅವಶ್ಯ. ಮಹಿಳೆಯರು ತಮ್ಮ ಸಂರಕ್ಷಣೆಗಾಗಿ ಒಗಟ್ಟಿನಿಂದ ಪ್ರಯತ್ನಿಸಬೇಕಾಗಿದೆ. ಮಹಿಳೆ ನಾಚಿಕೆ ಬಿಟ್ಟು ಸ್ವಾಭಿಮಾನ ಮತ್ತು ಸ್ವ ಸಾಮರ್ಥ್ಯದ ಮೇಲೆ ಪುರುಷ ಸಮಾನವಾಗಿ ಬೆಳೆಯಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜು ಪ್ರಾಚಾರ್ಯ ಸತ್ಯಪ್ಪ ಗೋಟೂರ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಸಂಜೀವ ಮಂಟೂರ, ಸಂಗಮೇಶ ಕುಂಬಾರ, ರಶ್ಮೀ ಕಳ್ಳಿಮನಿ, ಶಾಹೀನ ಕುರಬೇಟ, ಅಶ್ವಿನಿ ಗುರವ ಮತ್ತಿತರರು ಹಾಜರಿದ್ದರು.

ಮಲ್ಲಪ್ಪಾ ಪಾಟೀಲ ನಿರೂಪಿಸಿದರು. ಸುನೀಲ ಸತ್ತಿ ಸ್ವಾಗತಿಸಿದರು. ರಾಜೇಂದ್ರ ಪತ್ತಾರ ವಂದಿಸಿದರು.

# ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ನೈತಿಕ ಶಿಕ್ಷಣ ಮುಖ್ಯ: ನ್ಯಾಯಾಧೀಶೆ ಜ್ಯೋತಿ ಪಾಟೀಲ



**ಮೂಡಲಗಿ :** ಇಂದಿನ ವಿದ್ಯಾರ್ಥಿಗಳಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ಪಠ್ಯ ಪುಸ್ತಕದ ವಿಷಯದ ಜೊತೆಗೆ ನೈತಿಕ ಶಿಕ್ಷಣ ಕೊಡುವದು ಕೂಡ ತುಂಬಾ ಮುಖ್ಯವಾಗಿದೆ ಎಂದು ಮೂಡಲಗಿ ದಿವಾಣಿ ಹಾಗೂ ಜೆ.ಎಮ್.ಎಫ್. ಸಿ. ನ್ಯಾಯಾಲಯದ ನ್ಯಾಯಾಧೀಶೆ ಜ್ಯೋತಿ ಪಾಟೀಲ ಹೇಳಿದರು.

ಅವರು ತುಕ್ಕಾನಟ್ಟಿ ಸರಕಾರಿ ಮಾದರಿ ಶಾಲೆಯಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ತುಕ್ಕಾನಟ್ಟಿ ಹಾಗೂ ಸುತ್ತ ಮುತ್ತಲಿನ ಮತ್ತು ಮೂಡಲಗಿ, ಬೆಳಗಾವಿ ಜಿಲ್ಲೆಗಳ ಗಡಿ ಭಾಗದಲ್ಲಿ ಬಾಲ್ಯ ವಿವಾಹಗಳು ಬಹಳ ನಡೆಯುತ್ತಿರುವದು ನಮ್ಮ ಗಮನಕ್ಕೆ ಬಂದಿದೆ. ಇದರಿಂದ ಎಷ್ಟೋ ಬಾಲಕಿಯರ ಜೀವನ ಹಾಗೂ ಪ್ರತಿಭೆ ಕಮರಿ ಹೋಗುತ್ತಿದೆ. ಅದರಲ್ಲೂ ಇದನ್ನು ತಡೆಗಟ್ಟುವಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣದ ಜೊತೆಗೆ ನೈತಿಕ ಹಾಗೂ ವ್ಯವಹಾರಿಕ ಜ್ಞಾನವನ್ನು ಕಲಿಸಿಕೊಡಬೇಕಾಗುತ್ತದೆ ಎಂದರು. ವಿದ್ಯಾರ್ಥಿನಿಯರು ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟು ಬಾಲ್ಯವಿವಾಹಕ್ಕೆ ಒಳಗಾಗಿ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ತುಕ್ಕಾನಟಿಯಲ್ಲಿ ಸರಕಾರಿ ಪ್ರೌಢಶಾಲೆಯ ಅವಶ್ಯಕತೆಯಿದೆ. ಇದರಿಂದ ಬಾಲ್ಯ ವಿವಾಹ ಸ್ವಲ್ಪವಾದರೂ ತಡೆಗಟ್ಟುವುದರ ಜೊತೆಗೆ ಆ ಹೆಣ್ಣು ಮಗುವಿಗೆ ಒಳ್ಳೆಯ ಭವಿಷ್ಯವನ್ನು ಕಲ್ಪಿಸಿ ಕೊಟ್ಟಂತಾಗುತ್ತದೆ. ಈ ಮಹಿಳಾ ದಿನಾಚರಣೆಗೆ ನಾವು ಹೆಣ್ಣು ಮಕ್ಕಳಿಗೆ ಪ್ರೌಢ ಶಾಲೆ ಒದಗಿಸಿಕೊಡುವದೇ ನಿಜವಾದ ಕಾಣಿಕೆ ಎಂದರು.

ಮೂಡಲಗಿ ಕ್ಷೇತ್ರ ಶಿಕ್ಷಣಾಧಿಕಾರಿ ಅಜಿತ ಮನ್ನಿಕೇರಿ ಮಾತನಾಡಿ, ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು ಭಾಗವಹಿಸುವದರ ಜೊತೆಗೆ ತಾನು ಸಬಲೆ ಎಂಬುದನ್ನು ಸಾಬೀತುಪಡಡಿಸಿದ್ದಾಳೆ. ಶಾಸಕರು ಮೂಡಲಗಿ ವಲಯದ ಎಲ್ಲ ಸರಕಾರಿ ಶಾಲೆಯ ಸುಮಾರು 32,000 ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಸಾಕ್ಷರತಾ ಮಿಷನ್ ವತಿಯಿಂದ ಸಮವಸ್ತ್ರ, ಶಾಲಾ ಬ್ಯಾಗ್ ನಲ್ಲಿ ಸ್ವೇಟರಗಳನ್ನು ನೀಡುವದರ ಜೊತೆಗೆ ತಮ್ಮ ಶೈಕ್ಷಣಿಕ ಕಾಳಜಿಯನ್ನು ತೋರಿಸಿದ್ದಾರೆ. ಇದನ್ನು ಪಾಲಕರು ಸದುಪಯೋಗ ಪಡೆಸಿಕೊಳ್ಳಬೇಕೆಂದು ಕರೆ ನೀಡಿದರು.

ಗ್ರಾಮ ಪಂಚಾಯತ ಅಧ್ಯಕ್ಷೆ ಗಾಯತ್ರಿ ಬಾಗೇವಾಡಿ, ಉಪಾಧ್ಯಕ್ಷೆ ಸುನಂದಾ ಭಜಂತ್ರಿ ಮಾತನಾಡಿದರು.

ಸಸಿಗೆ ನೀರೆರೆಯುವುದರ ಮುಖಾಂತರ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ರಸಪ್ರಶ್ನೆ ವಿಭಾಗದಲ್ಲಿ 1 ರಿಂದ 8 ನೇ ತರಗತಿಯ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಧಾನಗುರುಗಳಾದ ಎ. ವ್ಹಿ ಗಿರೆಣ್ಣವರ ವಹಿಸಿದ್ದರು. ಶಿಕ್ಷಕ ಎಮ್. ಡಿ. ಗೋಮಾಡಿ ನಿರೂಪಿಸಿದರು.

ಸಮಾರಂಭದಲ್ಲಿ ಶಿಕ್ಷಕರಾದ ವಿಮಲಾಕ್ಷಿ ತೋರಗಲ್, ಲಕ್ಷ್ಮೀ ಹೆಬ್ಬಾಳ, ಪುಷ್ಪಾ ಭರಮದೆ, ರೂಪಾ ಹೂಲಿಕಟ್ಟಿ, ಪ್ರಿಯಾಂಕಾ ಡಿ.ಕೆ., ಸುಜಾತಾ ಕೋಳಿ, ವಾಸಂತಿ ಬೋರಗುಂಡಿ, ಮಹಾದೇವ ಗೋಮಾಡಿ, ಬಸವರಾಜ ನಾಯಿಕ, ಸೋಮಶೇಖರ ವಾಯ್. ಆರ್., ಚನ್ನಬಸಪ್ಪ ಸೀರಿ, ಅತಿಥಿ ಶಿಕ್ಷಕರಾದ ಹೊಳೆಪ್ಪಾ ಗದಾಡಿ, ಶಿವಲೀಲಾ ಹನಮನ್ನವರ, ಖಾತೂನ್ ನದಾಫ, ಅನ್ನಪೂರ್ಣಾ ಹುಲಕುಂದ, ಯಮುನಾ ಹನಮನ್ನವರ, ಪವಿತ್ರಾ ಬಡಿಗೇರ ಮೊದಲಾದವರು ಉಪಸ್ಥಿತರಿದ್ದರು.

# ಮಧುರ ಬಾಂಧವ್ಯದ ಮೆಲುಕು ಒಳಗೊಂಡ ವಿನೂತನ ಕೃತಿ "ಚಿಗಳಿ"

**ಬನಹಟ್ಟಿ :** ಸಿಹಿ, ಕಹಿ, ಹುಳಿ ಮಿಶ್ರಣದ ಚಿಗಳಿ ಆತ್ಮಕಥಾನಕ ರೂಪದ ಕೃತಿಯಾಗಿದೆ. ವೈಯಕ್ತಿಕ ಬದುಕು, ನಾಡಿನಾದ್ಯಂತ ವಿವಿಧ ಲೇಖಕರೊಂದಿಗಿನ ಒಡನಾಟ, ಮಧುರ ಬಾಂಧವ್ಯದ ಮೆಲುಕು ಒಳಗೊಂಡು ವಿನೂತನವಾಗಿ ಕೃತಿ ಮೂಡಿ ಬಂದಿದೆ. ಹುಲಗಬಾಳಿಯವರು ಹಸುಗೂಸು ಇದ್ದಾಗಲೇ ತಾಯಿಯನ್ನು ಕಳೆದುಕೊಂಡು ಜೀವನಪೂರ್ತಿ ತಾವು ಅನುಭವಿಸಿದ ಅನಾಥ ಪ್ರಜ್ಞೆಯನ್ನು ಮನಕಲಕುವಂತೆ ಬಿಚ್ಚಿಟ್ಟಿದ್ದಾರೆ ಎಂದು ಬನಹಟ್ಟಿ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರು, ಸಾಹಿತಿ ಚಂದ್ರಪ್ರಭಾ ಬಾಗಲಕೋಟ ಹೇಳಿದರು.

ಬನಹಟ್ಟಿಯ ಶಾಂತಾ ಈ. ಸೋರಗಾಂವಿ ಅವರ ನಿವಾಸದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ತಾಲ್ಲೂಕಾ ಘಟಕ ರಬಕವಿ-ಬನಹಟ್ಟಿ, ವಲಯಗಳು ತೇರದಾಳ, ಮಹಾಲಿಂಗಪುರ ಅವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಪುಸ್ತಕಾವಲೋಕನ-39 ಕಾರ್ಯಕ್ರಮದಲ್ಲಿ ಬನಹಟ್ಟಿಯ ವಿನೋದ ಸಾಹಿತಿಗಳಾದ ಮಲ್ಲಿಕಾರ್ಜುನ ಹುಲಗಬಾಳಿಯವರ 'ಚಿಗಳಿ' ಕೃತಿಯನ್ನು ಅವಲೋಕಿಸಿ ಇದರಲ್ಲಿ ಹುಲಗಬಾಳಿಯವರು ತಮ್ಮ ಪತ್ನಿಯ ಕುರಿತು ಕೆಲವೊಂದಿಷ್ಟು ವಿಚಾರಗಳನ್ನು ಪ್ರಸ್ತಾಪಿಸಬೇಕಿತ್ತು. ಇದು ನಮ್ಮ ಒತ್ತಾಸೆ ಎಂದರು.

ಆರ್. ಎಸ್. ಹುಲಗಬಾಳಿ ಮಾಸ್ತರರ



ವ್ಯಕ್ತಿತ್ವ, ಅವರೊಂದಿಗಿನ ಒಡನಾಟ ಕುರಿತು ಡಾ. ಡಿ. ಎ. ಬಾಗಲಕೋಟ, ಮಲ್ಲಿಕಾರ್ಜುನ ಜವಳಗಿ ಮಾತನಾಡಿದರು. ಹೆಂಡತಿ ಎಂದರೆ ತಾಯಿಯೇ.

ಅವರ ಬಗ್ಗೆಯೂ ಹೇಳುವುದು ಅಷ್ಟೇ ಅವಶ್ಯವೆಂದು ಬಸವರಾಜ ದುಂಬಾಳಿ, ಡಾ. ರವಿ ಜಮಖಂಡಿ ಹೇಳಿದರು. ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ ಸಂವಾದದಲ್ಲಿ ಮಾತನಾಡಿದರು.

ಶಾಂತಾ ಸೋರಗಾಂವಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪುಸ್ತಕಾವಲೋಕನ ಕಾರ್ಯಕ್ರಮ ತಮ್ಮ ನಿವಾಸದಲ್ಲಿ ಹಮ್ಮಿಕೊಂಡ ಸಂದರ್ಭದಲ್ಲಿ ಮಹಿಳಾ ಸಹಕಾರಿ ಸಂಘದ ರಾಜ್ಯ ಮಟ್ಟದ ಪ್ರಶಸ್ತಿ ಪಡೆದಿದ್ದು, ಕನ್ನಡ ಮನಸ್ಸುಗಳು, ಹಿರಿಯ ಸಾಹಿತಿಗಳು ತಮ್ಮ ನಿವಾಸಕ್ಕೆ ಆಗಮಿಸಿದ್ದು ತಮಗೆ ಅತ್ಯಂತ ಸಂತಸವನ್ನುಂಟು ಮಾಡಿದೆ ಎಂದರು. ತಾವು ಯಾವಾಗಲೂ ಸಾಹಿತ್ಯ ಪರಿಷತ್ತಿಗೆ ನೆರವು, ಸಹಕಾರ ನೀಡುವುದಾಗಿ ತಿಳಿಸಿದರು.

ತಾಲ್ಲೂಕಾ ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ ಪ್ರಾಸ್ತಾವಿಕವಾಗಿ ಮಾತನಾಡಿ ಯುಗಾದಿ ಕವಿಗೋಷ್ಠಿಯಲ್ಲಿ ಹಿರಿಯ ಸಾಹಿತಿಗಳೊಂದಿಗೆ, ಈ ಬಾರಿಗೆ ಕಾಲೇಜು ವಿದ್ಯಾರ್ಥಿ/ನಿಯರಿಗೆ ಹೆಚ್ಚಿನ ಅವಕಾಶ ಕಲ್ಪಿಸಲಾಗುವುದು. ಎಪ್ರಿಲ್ ತಿಂಗಳ ಬೇಸಿಗೆ ರಜೆಯಲ್ಲಿ ಬನಹಟ್ಟಿಯಲ್ಲಿ ಏಳು ದಿನಗಳ ಗೀತಗಾಯನ ಶಿಬಿರ ಹಮ್ಮಿಕೊಳ್ಳಲು ಯೋಚಿಸಲಾಗಿದೆ ಎಂದರು.

ದಾನೇಶ್ವರಿ ಮಹಿಳಾ ವಿದ್ಯುತ್ ಮಗ್ಗಗಳ ಸಹಕಾರಿ ಸಂಘದ ಅಧ್ಯಕ್ಷರಾಗಿ ರಾಜ್ಯ ಮಟ್ಟದ ವೀರರಾಣಿ ಕಿತ್ತೂರು ಚೆನ್ನಮ್ಮ ಪ್ರಶಸ್ತಿ ಪಡೆದಿರುವುದಕ್ಕೆ ಪರಿಷತ್ತಿನಿಂದ ಶಾಂತಾ ಸೋರಗಾಂವಿ ಅವರನ್ನು ಮಹಿಳಾ ಪ್ರತಿನಿಧಿಗಳಾದ ಗೌರಿ ಮಿಳ್ಳಿ, ಸರ್ವಮಂಗಳಾ ಹಿರೇಮಠ ಹಾಗೂ ಮೀನಾಕ್ಷಿ ಸವದಿ ಹೃದಯಾರೆ ಸನ್ಮಾನಿಸಿದರು.

ಹಿರಿಯ ಸಾಹಿತಿಗಳಾದ ಬಿ. ಆರ್. ಪೊಲೀಸ್ ಪಾಟೀಲ, ಎಂ. ಎಸ್. ಬದಾಮಿ, ಶಿವಾನಂದ ಬಾಗಲಕೋಟಮಠ, ಶಿವಾನಂದ ದಾಶಾಳ, ಎಸ್. ಎಸ್. ಹಿರೇಮಠ, ಈರಣ್ಣ ಗಣಮುಖಿ, ಡಿ. ಬಿ. ಜಾಯಗೊಂಡ, ಮಹಾಶಾಂತ ಶೆಟ್ಟಿ, ಬಸಯ್ಯ ವಸ್ತ್ರದ, ಬಾಳು ಗಣೇಶನವರ, ಮಲ್ಲೇಶಪ್ಪ ಕುಚನೂರ,

ಬ್ರಿಜ್ಮೋಹನ ಡಾಗಾ, ಮೋಹನ ಪತ್ತಾರ, ಗೌರಿ ಮಿಳ್ಳಿ, ಸುವರ್ಣಾ ಕೊಪ್ಪದ ಇನ್ನಿತರರು ಭಾಗವಹಿಸಿದ್ದರು. ಹಿರಿಯ ಸಾಹಿತಿಗಳು, ಸಾಹಿತ್ಯಾಸಕ್ತರು ಸೇರಿದಂತೆ ಇಂದು ಮಹಿಳೆಯರು ಅತೀ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಮೆರಗು ಹೆಚ್ಚಿಸಿದ್ದರು.

ಹಿರಿಯ ಕಲಾವಿದ ಮಲ್ಲಪ್ಪ ಗಣಿ ಪ್ರಾರ್ಥಿಸಿದರು. ಮಹಾಲಿಂಗಪುರ ವಲಯ ಅಧ್ಯಕ್ಷ ಬಸವರಾಜ ಮೇಟಿ ಸ್ವಾಗತಿಸಿದರು. ಡಾ. ಚಂದ್ರಕಾಂತ ಹೊಸೂರ ಸೊಗಸಾಗಿ ನಿರೂಪಿಸಿದರು. ದಾನಪ್ಪ ಆಸಂಗಿ ಕೊನೆಯಲ್ಲಿ ವಂದಿಸಿದರು.

# ಡಾ. ನಾಗಲಕ್ಷ್ಮೀ ಚೌಧರಿರವರಿಗೆ ಹೃದಯ ಸ್ಪರ್ಶಿ ಸನ್ಮಾನ



**ಬೆಂಗಳೂರು :** ಬೆಂಗಳೂರಿನ ಕಾವೇರಿ ಭವನದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮೀ ಚೌಧರಿ ರವರು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾಗಿ ಒಂದು ವರ್ಷ ಪೂರೈಸಿದ ಇವರು ಇತ್ತೀಚೆಗೆ ನೆಡೆದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕ್ಯಾಲೆಂಡರ್ ಬಿಡುಗಡೆ-ಯ ಸಮಾರಂಭಕ್ಕೆ ಕೆ.ಆರ್.ಪೇಟೆಗೆ ಆಗಮಿಸಿ ವಿವಿಧ ಇಲಾಖೆಗಳಿಗೆ ಭೇಟಿ ನೀಡಿ ಕೂಡಲಕುಪ್ಪೆ ಗ್ರಾಮದ ಸಮಸ್ಯೆಗೆ ಸ್ಪಂದಿಸಿದ್ದು ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕ್ಯಾಲೆಂಡರ್ ಬಿಡುಗಡೆ ಸಮಾರಂಭಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ಡಾ.ನಾಗಲಕ್ಷ್ಮೀ ಚೌಧರಿ ರವರಿಗೆ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಕೋರಿ ಹೃದಯಸ್ಪರ್ಶಿ ಸನ್ಮಾನಿಸಲಾಯಿತು,

ಈ ಸಂದರ್ಭದಲ್ಲಿ ವಿಠಲಾಪುರ ಗ್ರಾಮ ಪಂಚಾಯಿತಿ ಸದಸ್ಯರಾದ ವನಿತಾ ಲೋಕೇಶ್.ಕೆ.ಜೆ, ದೊಡ್ಡನಕಟ್ಟೆ ಗೀತಾ ನಾರಾಯಣ್.ಡಿ.ಸಿ, ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೋವಿಂದರಾಜು,

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕೆ.ಆರ್.ಪೇಟೆ ಘಟಕದ ತಾಲೂಕು ಅಧ್ಯಕ್ಷರಾದ ಲೋಕೇಶ್.ವಿ, ಉಪಾಧ್ಯಕ್ಷರಾದ ಜಿ.ಪಿ ರಾಜು, ಪತ್ರಕರ್ತರಾದ ಎ.ಬಿ.ಪ್ರತಾಪ್

ಸೇರಿದಂತೆ ನಾಗಲಕ್ಷ್ಮೀ ಚೌಧರಿ ಅಭಿಮಾನಿಗಳ ಬಳಗದವರು ಹಾಜರಿದ್ದರು,

**ವರದಿ:ಎಸ್ ರವಿ ಹೊನ್ನೇನಹಳ್ಳಿ**

# ಬರಲಿರುವ ಚುನಾವಣೆಗಳಲ್ಲಿ ಮಹಿಳೆಯರದೇ ಪಾರುಪತ್ಯ

**ಮಹಾಲಿಂಗಪುರ :** ಮೋದಿಜಿಯವರ ಕೇಂದ್ರ ಸರ್ಕಾರ ಇತ್ತೀಚೆಗೆ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿಯೂ ಕೂಡ ಶೇ. 33 ಮೀಸಲಾತಿ ಘೋಷಿಸಿದ್ದು, ಮುಂದಿನ ಚುನಾವಣೆಯಲ್ಲಿ ರಾಜ್ಯದಲ್ಲಿ 70 ಕ್ಕೂ ಅಧಿಕ ಮಹಿಳೆಯರು ಶಾಸಕರಾಗಿ, ದೇಶದಲ್ಲಿ 175 ಕ್ಕೂ ಅಧಿಕ ಮಹಿಳೆಯರು ಸಂಸದರಾಗಿ ಆಯ್ಕೆಯಾಗುವುದು ಖಚಿತ.

ಹೀಗೆ ಸರ್ಕಾರ ಮತ್ತು ಸಮಾಜದ ಬೆಂಬಲವನ್ನು ಮಹಿಳೆಯರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ ಹೇಳಿದರು.

ಸ್ಥಳೀಯ ಬಸವನಗರದ ಬಸವೇಶ್ವರ ಸಮುದಾಯ ಭವನದಲ್ಲಿ ಸಿ.ಎಂ. ಹುರಕಡ್ಲಿ ಫೌಂಡೇಶನ್ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ ಮತ್ತು ಮಹಿಳೆಯರ ಕಾಲಿಗೆ ಉಚಿತ ಥಾಲಿ



ಮಸಾಜ್ ಥೆರಪಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,

ಚನ್ನಬಸು ಹುರಕಡ್ಲಿಯವರ ಸಮಾಜ ಸೇವಾ ಕಾರ್ಯಗಳನ್ನು ಮಾತಿನಲ್ಲಿ ಹೇಳಲು ಸಾಧ್ಯವಿಲ್ಲ. ಅವರು ಮಹಾಲಿಂಗಪುರದ ಹೆಮ್ಮೆ ಎಂದರು.

ಸಂಪನ್ಮೂಲ ವ್ಯಕ್ತಿ ಸ್ನೇಹಾ ಹಿರೇಮಠ ಉಪನ್ಯಾಸ ನೀಡಿ ದೇಶದ ರಾಷ್ಟ್ರಪತಿಯಿಂದ ಹಿಡಿದು ಸರ್ವ ರಂಗಗಳಲ್ಲೂ ಮಹಿಳೆ ಇದ್ದರೂ ಪುರುಷರಿಗೆ ಸಮಾನವಾದ ಅವಕಾಶಗಳು ದೊರೆತಿಲ್ಲ. ಗಂಡನನ್ನೇ ಕೇಳಿ ಅಧಿಕಾರ ನಡೆಸುವಂತಾಗಿದೆ. ಸ್ವಾವಲಂಬನೆ ಬಂದಾಗ ಮಾತ್ರ ಸಂಪೂರ್ಣ ಸ್ವಾತಂತ್ರ್ಯ ಮತ್ತು ಸಮಾನತೆ ಸಾಧ್ಯ ಎಂದರು.

ಸಿದ್ಧಾರೂಢ ಮಠದ ಸಿದ್ಧಾನಂದ ಭಾರತಿ ಸ್ವಾಮೀಜಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ, ಭಾರತ ದೇಶದಲ್ಲಿ ಸ್ತ್ರೀಗೆ ನೀಡಿರುವ ಸ್ಥಾನ ಮಾನ ಬೇರಾವುದಕ್ಕೂ ನೀಡಿಲ್ಲ. ಸುಸಂಸ್ಕೃತ ತಾಯಂದಿರಿಂದ ದೇಶದ ಉದ್ಧಾರ ಸಾಧ್ಯ ಎಂದರು.

ಹೋಟೆಲ್ ನಡೆಸುತ್ತಿರುವ ಸ್ವಾಭಿಮಾನಿ 93 ವರ್ಷದ ಗೌರವ್ವ ಮಳಲಿ ಅವರನ್ನು ಗೌರವಿಸಲಾಯಿತು. ಕಲಾವಿದರಿಂದ ಚಿತ್ರಕಲಾ ಪ್ರದರ್ಶನ, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾಯ9ಕ್ರಮ ಜರುಗಿದವು.

ಸಿ. ಎಂ. ಹುರಕಡ್ಲಿ ಫೌಂಡೇಶನ್ ಅಧ್ಯಕ್ಷ ಚನ್ನಬಸು ಹುರಕಡ್ಲಿ ಮಾತನಾಡಿದರು. ಹನಮಂತ ಶಿರೋಳ, ಪುರಸಭೆ ಉಪಾಧ್ಯಕ್ಷೆ ಶೀಲಾ ಭಾವಿಕಟ್ಟಿ, ಸದಸ್ಯರಾದ ಚಾಂದನಿ ನಾಯಕ, ಸವಿತಾ ಹುರಕಡ್ಲಿ, ಮುಖಂಡರಾದ ಶ್ರೀಶೈಲಪ್ಪ ಉಳ್ಳಾಗಡ್ಡಿ, ಮಹಾಲಿಂಗಪ್ಪ ಕಂಠಿ, ಶ್ರೀಶೈಲ ಕೆರೂರ, ಬಸವರಾಜ ಗಿರಿಸಾಗರ, ಪ್ರಕಾಶ ಬಾಡನವರ, ಮಲಕಾಜಪ್ಪ ಹನಗಂಡಿ, ಮಹಾದೇವಪ್ಪ ಟಿರಕಿ, ಮಾಲಾ ಶಿರೋಳ, ಸುವರ್ಣಾ ಕರೆನ್ನವರ, ತಾಯವ್ವ ಪಾಟೀಲ, ರಶ್ಮಿ ಬಳ್ಳೂರ, ಉಮಾ ಪೂಜಾರಿ, ಕಾವ್ಯ ಮಾಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ, ಹಾಗೂ ಮಹಿಳಾ ಸಾಧಕರಿಗೆ ಸನ್ಮಾನ

**ಕೆ ಆರ್ ಪೇಟೆ :** ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ನಾಟನಹಳ್ಳಿ ಗಂಗಾಧರ್,ನೇತೃತ್ವದಲ್ಲಿ ತಾಲೂಕು ಒಕ್ಕಲಿಗರ ಸಂಘ,ಕೃಷಿಕ ಸಮಾಜ, ರೈತ ಹಿತರಕ್ಷಣಾ ಹೋರಾಟ ಸಮಿತಿ, ಅಪ್ಪು ಯುವ ಸಮಾಜ ಸೇವಾ ಟ್ರಸ್ಟ್ನ ಸಂಯುಕ್ತಾಶ ಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣ ಹಾಗೂ ಮಹಿಳಾ ಸಾಧಕರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ.ನಂದಿನಿ ಜಯರಾಮ್, "ಸಮಾಜದಲ್ಲಿ ಇಂದು ಹೆಣ್ಣಿಗೆ ಹೆಣ್ಣೆ ಹೂವಾಗಿ ಕಾಡುತ್ತಿದ್ದಾಳೆ. ಹೆಣ್ಣು ಮಗುವು ತಾನು ಹುಟ್ಟುವ ಹಕ್ಕನ್ನು ಪಡೆದುಕೊಳ್ಳಲು ಹೋರಾಟ ಮಾಡ ಬೇಕಾದ ಅನಿವಾರ್ಯ ಪರಿಸ್ಥಿತಿಯು ನಿರ್ಮಾಣವಾಗಿರುವುದು ವಿಷಾದನೀಯ ಸಂಗತಿಯಾಗಿದೆ. ಹೆಣ್ಣು ಮಕ್ಕಳ ಭ್ರೂಣ ಹತ್ಯೆಯಂತಹ ಘಟನೆಗಳು,ಮಂಡ್ಯ ಜಿಲ್ಲೆಯಲ್ಲಿ,ವಿದ್ಯಾವಂತರಿಂದಲೇ ನಿರಂತರವಾಗಿ ನಡೆಯುತ್ತಿರುವುದು ಹೆಚ್ಚಾಗಿ ಆತಂಕಕಾರಿ ಬೆಳವಣಿಗೆಯಾಗಿದೆ. ಹೆಣ್ಣು ಮಕ್ಕಳನ್ನು ಟೀಕೆ ಟಿಪಣಿ ಹಾಗೂ ನಿಂದನೆಗಳಿಗೆ ತಲೆ ಕೆಡಿಸಿಕೊಳ್ಳದೇ ಆತ್ಮವಿಶ್ವಾಸ ಹಾಗೂ ಛಲದಿಂದ ಹೆಜ್ಜೆಹಾಕಿ ಸಾಧನೆ ಮಾಡಬೇಕು," ಎಂದು ಹೇಳಿದರು.

ನಂತರ ಕೆ.ಆರ್.ಪೇಟೆ ಪಟ್ಟಣ ಪೊಲೀಸ್ ಠಾಣೆ-ಯ ಇನ್ಸ್ ಪೆಕ್ಟರ್ ಸುಮಾರಾಣಿ ಮಾತನಾಡಿ, "ಹೆಣ್ಣು ಮಕ್ಕಳು ತಮ್ಮಲ್ಲಿರುವ ವೃತ್ತಿ ಕೌಶಲವನ್ನು ಸದ್ಬಳಕೆ ಮಾಡಿಕೊಂಡು ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿ ಆರ್ಥಿಕ ಸ್ವಾವಲಂಬನೆ ಮೂಲಕ ಪ್ರಗತಿ ಪಥದತ್ತ ಸಾಗಬೇಕು. ಜೀವನದಲ್ಲಿ ಎದುರಾಗುವ ಸವಾಲುಗಳು ಹಾಗೂ ಸಮಸ್ಯೆಗಳಿಗೆ ಎದೆಗುಂದದೆ ಆತ್ಮವಿಶ್ವಾಸ ದಿಂದ ಗುರಿಸಾಧನೆ ಮಾಡಬೇಕು.

ಕಷ್ಟದಲ್ಲಿರುವ ನಮ್ಮ ಹಿತೈಷಿಗಳು ಹಾಗೂ ಸ್ನೇಹಿತರಿಗೆ ಕೈಲಾದ ಸಹಾಯ ಮಾಡಬೇಕು, ಇವತ್ತಿನ ಮಕ್ಕಳು ಮೊಬೈಲ್ಗಳಿಗೆ ಮರಿಹೋಗಿದರೆ ಮನೆಯಲ್ಲಿ, ನಿಮ್ಮ ಮಕ್ಕಳ ಕಡೆ ಸ್ವಲ್ಪ ಗಮನ ಹರಿಸಬೇಕು ಪೋಷಕರು, ಜೊತೆಗೆ ಇವತ್ತಿನ ದಿನಗಳಲ್ಲಿ ಓಡಿ ಹೋಗಿ ಮದುವೆಯಾಗುವುದು ತುಂಬಾ ಹೆಚ್ಚಾಗಿ ಹೋಗಿದೆ ಇದರಿಂದ ತಂದೆ ತಾಯಿಗಳು. ಎಷ್ಟು ನೋವು ಪಡಬೇಕಾಗುತ್ತದೆ ಎಂದು ಮಕ್ಕಳಿಗೆ ತಿಳಿದಿರುವುದಿಲ್ಲ ಅದಕ್ಕಾಗಿ ನಿಮ್ಮ ಮಕ್ಕಳ ಕಡ ಸ್ವಲ್ಪ ಗಮನ ಹರಿಸಬೇಕು ಎಂದು ತಿಳಿಸಿದರು,

ಈ ಸಂದರ್ಭದಲ್ಲಿ ಸಮಾಜ ಸೇವಕ ಆರ್ ಟಿ ಓ ಮಲ್ಲಿಕಾರ್ಜುನ್, ಕಿಕ್ಕೇರಿ ಪೊಲೀಸ್ ಠಾಣೆ ಇನ್ಸ್ಪೆಕ್ಟರ್‌ರೇವತಿ,ಪುರಸಭೆಅಧ್ಯಕ್ಷೆಪಂಕಜಾ,ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಮೀನಾಕ್ಷಿ, ಮಧು,ಡಾ.ಪ್ರಿಯಾಂಕಾ, ಡಾ.ರಾಜೇಶ್ವರಿ, ಭೋರೇಗೌಡ , ಒಕ್ಕಲಿಗರ ಸಂಘದ ಅಧ್ಯಕ್ಷರು ಹಾಗು ಪದಾಧಿಕಾರಿಗಳು ಉಪಸ್ಥಿತರಿದ್ದರು

**ವರದಿ: ಎಸ್ ರವಿ ಹೊನ್ನೇನಹಳ್ಳಿ**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State

Designed by MKG-9535762618